International Journal of Kannada Research 2023; 9(2): 10-20



International Journal of Kannada Research
www.kannadajournal.com

ISSN: 2454–5813
IJKR 2023; 9(2): 10-20
© 2023 IJKR
www.kannadajournal.com
Received: 13-01-2023
Accepted: 16-02-2023

**ಡಾ. ಕಲಾವತಿ.ಹೆಚ್.ಕೆ**
ಸಂಶೋಧನಾ ಸಹಾಯಕರು, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ, ಟಮ್ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಕರ್ನಾಟಕ, ಭಾರತ

**ಡಾ. ಗೋಪಾಲ.ಎಸ್**
ಸಂಶೋಧನಾ ಸಹಾಯಕರು, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ, ಟಮ್ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಕರ್ನಾಟಕ, ಭಾರತ

**ಡಾ. ಎಂ.ರಾಚಪ್ಪಾಜಿ**
ಅಧ್ಯಾಪಕರು, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಕರ್ನಾಟಕ, ಭಾರತ

**Corresponding Author:**
**ಡಾ. ಕಲಾವತಿ.ಹೆಚ್.ಕೆ**
ಸಂಶೋಧನಾ ಸಹಾಯಕರು, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ, ಟಮ್ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಕರ್ನಾಟಕ, ಭಾರತ

# ಭಾರತದಲ್ಲಿ ಮಹಿಳೆಯರ ವಿರುದ್ಧದ ಅಪರಾಧಗಳು: ಅಂಕಿ–ಅಂಶಗಳ ವಿಮರ್ಶೆ (2009–10 ರಿಂದ 2018–19)

**ಡಾ. ಕಲಾವತಿ.ಹೆಚ್.ಕೆ, ಡಾ. ಗೋಪಾಲ.ಎಸ್, ಡಾ. ಎಂ.ರಾಚಪ್ಪಾಜಿ**

**ಸಾರಾಂಶ**
ಭಾರತೀಯ ಸಮಾಜದಲ್ಲಿ ಮಹಿಳೆಗೆ ಒಂದು ಮಹತ್ವದ ಗೌರವಾನ್ವಿತ ಸ್ಥಾನವಿದೆ. ಹಾಗೆಯೇ ವೇದಗಳ ಕಾಲದಲ್ಲಿ ಮಹಿಳೆಯನ್ನು ಮಾತೆ, ಸೃಷ್ಟಿಕರ್ತೆ, ಒಂದು ಹೊಸ ಜೀವ ನೀಡುವವಳು ಮತ್ತು ದೇವಿಯ ಸ್ವರೂಪವೆಂದು, ದೇವತೆಯಾಗಿ ಪೂಜ್ಯನೀಯಳು ಎಂದು ವೈಭವೀಕರಿಸಲ್ಪಡುತ್ತಾಳೆ. ಆದರೆ ವೈಭವೀಕರಣವು ಅದೇ ಸಮಯದಲ್ಲಿ ಪೌರಾಣಿಕತೆಯೂ ಕೂಡ ಆಗಿತ್ತು ಎಂದು ಹೇಳಬಹುದು. ಭಾರತದ ಸಾಮಾಜಿಕ ವ್ಯವಸ್ಥೆಯ ಸಂದರ್ಭದಲ್ಲಿ ಮಹಿಳೆಯರು ಪುರುಷ ಪ್ರಧಾನ ಪ್ರಭುತ್ವದಲ್ಲಿ ಸಂಪೂರ್ಣವಾಗಿ ಎಲ್ಲಾ ಹಕ್ಕು ಹಾಗೂ ಅಧಿಕಾರಗಳನ್ನು ಕಳೆದುಕೊಂಡು ನಿಗ್ರಹಿಸಲ್ಪಟ್ಟಿದ್ದಾಳೆ. ಆ ಮೂಲಕವಾಗಿಯೇ ಮಹಿಳೆಯು ಪುರುಷನ ಅಧೀನಳಾಗಿದ್ದಾಳೆ ಎಂಬುದನ್ನು ಸಮಕಾಲೀನ ಸಂದರ್ಭದಲ್ಲಿಯೂ ಕೂಡ ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ಭಾರತ ದೇಶದಲ್ಲಿನ ಮಹಿಳೆಯರು ಪ್ರತಿ ಹಂತದಲ್ಲಿಯೂ ಪುರುಷರ ಅಧೀನದಲ್ಲಿದ್ದು ತುಳಿತಕ್ಕೆ ಒಳಗಾಗಿ ಬಲಿಪಶುವಾಗುತ್ತಿದ್ದಾಳೆ. ಏಕೆಂದರೆ, ಸಮಾಜದಲ್ಲಿನ ಹಿಂಸಾಚಾರದ ದಬ್ಬಾಳಿಕೆಯೊಂದಿಗೆ ಸಾಂಪ್ರದಾಯಿಕ ನಂಬಿಕೆಗಳಿಗೆ ಹೆಚ್ಚು ಅಂಟಿಕೊಂಡಿದ್ದಾರೆ ಎಂದು ನಂಬಲಾಗಿದೆ. ಮಹಿಳೆಯು ಭಾರತದಲ್ಲಿ ಸಾಮಾಜಿಕವಾಗಿ, ದೈಹಿಕವಾಗಿ, ಮಾನಸಿಕವಾಗಿ ಹಾಗೂ ಭಾವನಾತ್ಮಕವಾಗಿಯೂ ಕೂಡ ದೌರ್ಜನ್ಯಕ್ಕೆ ಒಳಗಾಗಿ ತನ್ನ ಅಸ್ತಿತ್ವವನ್ನೇ ಕಳೆದುಕೊಂಡು ಅದನ್ನು ಮತ್ತೆ ಪಡೆಯಲು ಪ್ರತಿಭಟಿಸುತ್ತಾ ಬಂದಿರುತ್ತಾಳೆ ಎಂಬುದು ಜಾಗತಿಕ ಸತ್ಯ.

**ಪ್ರಮುಖ ಪದಗಳು:** ಅಪರಾಧಗಳು, ಸಾಮಾಜಿಕ ಹಿಂಸೆ, ಮಹಿಳಾ ರಕ್ಷಣೆಗಳು, ಕ್ರೂರತ್ವದ ಪ್ರಕರಣಗಳು ಹಾಗೂ ಲೈಂಗಿಕ ಕಿರುಕುಳ

## ಪರಿಚಯ

ಪ್ರಸ್ತುತ ಸಮಕಾಲೀನ ಸಂದರ್ಭವನ್ನು ಒಮ್ಮೆ ಸಿಂಹಾವಲೋಕನ ಮಾಡಿದಾಗ; ಮಹಿಳೆಯರು ಹೆಚ್ಚಿನ ರೀತಿಯಲ್ಲಿ ಲೈಂಗಿಕ ಹಾಗೂ ಭೋಗದ ವಸ್ತುಗಳೇ ಆಗಿದ್ದಾರೆ. ಇವರು ಬದುಕಿನ ಪ್ರತಿಯೊಂದು ವಲಯದಲ್ಲೂ ಕೂಡ ಪುರುಷರಿಗೆ ಆಂತರಿಕವಾಗಿ, ಬಾಹ್ಯವಾಗಿ ಮತ್ತು ವ್ಯಾಪಕವಾಗಿಯೂ ಕೂಡ ಅಧೀನಕ್ಕೆ ಒಳಪಟ್ಟಿದ್ದಾರೆ ಎಂದು ಪರಿಗಣಿಸಲಾಗುತ್ತದೆ. ಭಾರತವು ಅತೀ ಹೆಚ್ಚು ಗ್ರಾಮೀಣ ಪ್ರದೇಶಗಳನ್ನು ಹೊಂದಿರುವಂತಹ ರಾಷ್ಟ್ರವೆಂದು ಇಡೀ ಜಗತ್ತಿಗೆ ತಿಳಿದಿರುವ ಸತ್ಯದ ಸಂಗತಿ. ಆದ್ದರಿಂದಲೇ ಇಂತಹ ಗ್ರಾಮೀಣ ಭಾಗದಲ್ಲಿ ತಪ್ಪು ಮಾಡಿದವರಿಗೆ ದೈಹಿಕವಾಗಿ ಹಿಂಸಿಸುವುದು, ಮದುವೆಯಾಗದೇ ಮನೆಯಲ್ಲಿಯೇ ಇರುವಂತಹ ಹೆಣ್ಣು ಮಕ್ಕಳಿಗೆ, ಸೋದರಿಯರಿಗೆ ಹಾಗೂ ಇತರ ಸಂಬಂಧಿಕರಿಗೆ ಚಿತ್ರಹಿಂಸೆಯನ್ನು ನೀಡುವುದು ಕೂಡ ಸರ್ವೇ ಸಾಮಾನ್ಯವಾಗಿರುವಂತಹ ವಿದ್ಯಮಾನವೇ ಆಗಿರುತ್ತದೆ. ಹೆಚ್ಚಿನ ಬಾಲಕಿಯರು ಕುಟುಂಬದ ಮೇಲೆ ಅಧಿಕವಾದಂತಹ ಹೊರೆ ಆಗಿದ್ದಾರೆ ಎಂದು ಸಂದರ್ಭದಲ್ಲೂ ಕೂಡ ಇಂತಹ ಬಾಲಕಿಯರು ಪ್ರೌಢಾವಸ್ಥೆಗೆ ಬಂದಾಗ ಮದುವೆ ಮಾಡಲು ಹೆಚ್ಚಿನ ಪ್ರಮಾಣದ ಹಣಕಾಸಿನ ಅಗತ್ಯವಿರುತ್ತದೆ ಹಾಗೂ ಬಹುಮುಖ್ಯವಾಗಿ ಮಧ್ಯಮ ಅಥವಾ ಉನ್ನತ ಮಟ್ಟದ ಶಿಕ್ಷಣಕ್ಕೆ ಇವರಿಗೆ ಪ್ರೋತ್ಸಾಹ ಹಾಗೂ ಸಹಕಾರವನ್ನು ನೀಡುವುದಿಲ್ಲ. ಏಕೆಂದರೆ, ಈ ಶಿಕ್ಷಣ ವ್ಯವಸ್ಥೆಯಲ್ಲಿ ಸನಾತನೀಯ ಕಾಲದಿಂದಲೂ ಕೂಡ ಪುರುಷ ಮತ್ತು ಮಹಿಳೆ ಎಂಬ ತಾರತಮ್ಯತೆಯ ನೀತಿಯು ಕೂಡ ರೂಢಿಗತವಾಗಿಯೇ ಬಂದಿರುತ್ತದೆ. ಅಂದರೆ ಬಾಲಕಿಯರು ಮತ್ತು ಮಹಿಳೆಯರು ಮನೆಗೆ ಮಾತ್ರ ಸೀಮಿತವಾಗಿರಬೇಕು ಎಂಬ ಸಾರ್ವತ್ರಿಕ ಮನೋಭಾವನೆಯೇ ಲಿಂಗ ತಾರತಮ್ಯಕ್ಕೆ ಬಹುಮುಖ್ಯವಾಗಿರುವ ಕಾರಣವೇ ಆಗಿರುತ್ತದೆ. ಬಾಲಕಿಯರು ಮತ್ತು

ಮಹಿಳೆಯರಿಗೆ ಅವಮಾನ, ಕಿರುಕುಳ, ಹಿಂಸೆ ಮತ್ತು ಶೋಷಣೆಗಳು ಕೌಟುಂಬಿಕ ಬದುಕಿನಲ್ಲಿ ಚರಿತ್ರೆಯಷ್ಟೆ ಹಳೆಯದೇ ಆಗಿರುತ್ತದೆ.
ಭಾರತೀಯ ಸಾಮಾಜಿಕ ಶಾಸನವು ದೇಶದಲ್ಲಿನ ಮಹಿಳೆಯರಿಗಿಂತಲೂ ಹಿಂದೆ ಬಿದ್ದಿದ್ದರೆ ಇದಕ್ಕೆ ಬಹುಮುಖ್ಯವಾಗಿರುವಂತಹ ಕಾರಣ ಮಹಿಳೆಯರ ಹಕ್ಕುಗಳು ಹಾಗೂ ಅವರಿಗೆ ನೀಡಿರುವ ಕಾನೂನುಗಳ ಅನುಷ್ಠಾನವು ತುಂಬಾ ನಿಧಾನ ಹಾಗೂ ಮಂದಗತಿಯ ಎಡಬಿಡಂಗಿ ಅವ್ಯವಸ್ಥಿತವೇ ಆಗಿದೆ. ಆದ್ದರಿಂದಲೇ ಭಾರತದ ಮಹಿಳೆಯರು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಾಗೂ ರಾಜಕೀಯವಾಗಿಯೂ ಕೂಡ ಪುರುಷರಿಗಿಂತ ಹಿಂದುಳಿದಿದ್ದಾರೆ ಎಂದು ಹೇಳಬಹುದು. ಇದಕ್ಕೆಲ್ಲಾ ಪ್ರಧಾನ ಕಾರಣವೆಂದರೆ, ಅದುವೇ ಭಾರತದ ಅಲಿಖಿತ ಕಾನೂನಿನ ಆಡಳಿತವೇ ಆಗಿರುತ್ತದೆ. ಇಲ್ಲಿರುವ ಅಲಿಖಿತ ಅವೈಜ್ಞಾನಿಕ ಕಾನೂನಿನ ಬದಲಿಗೆ ಶ್ರಮವಹಿಸಿ ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರಂತಹ ಶ್ರೇಷ್ಠ ತಜ್ಞರಿಂದ ರೂಪುಗೊಂಡಿರುವ ಭಾರತ ಸಂವಿಧಾನವು ಯಥಾವತ್ತಾಗಿ ಜಾರಿಗೆ ಬಂದರೆ; ನಮ್ಮ ದೇಶದ ಸಮಸ್ತ ಮಹಿಳೆಯರು ಕೂಡ ಇಡೀ ಜಗತ್ತಿನ ಮಹಿಳೆಯರಿಗಿಂತಲೂ ಎಲ್ಲಾ ಕ್ಷೇತ್ರದಲ್ಲಯೂ ಮುಂದೆ ಬರುತ್ತಾರೆ ಎಂಬುದು ಹೆಚ್ಚು ಖಚಿತವಾಗುತ್ತದೆ.
ಪ್ರಸ್ತುತ ಸಂಶೋಧನಾ ಲೇಖನದಲ್ಲಿ ಭಾರತದಲ್ಲಿನ ಮಹಿಳೆಯರ ವಿರುದ್ಧದ ಅಪರಾಧಗಳನ್ನು ಕುರಿತಂತೆ ಬಹುಮಟ್ಟಿಗೆ ಈ ಕೆಳಗಿನ ಅಂಕಿ–ಅಂಶಗಳ ಸಹಿತ ಒಂದು ವಿಸ್ತೃತವಾದಂತಹ ವಿಮರ್ಶೆಗೆ ಒಳಪಡಿಸಲಾಗಿರುತ್ತದೆ. ಈ ನೆಲೆ ಮತ್ತು ಹಿನ್ನೆಲೆಯಿಂದಲೇ ಕೆಲವು ಪ್ರಧಾನ ಉದ್ದೇಶಗಳನ್ನು ಕೂಡ ಹೊಂದಿರುತ್ತದೆ ಎಂದು ಹೇಳಬಹುದು. ಅವುಗಳೆಂದರೆ;

**ಅಧ್ಯಯನದ ಉದ್ದೇಶಗಳು**

1. ಪ್ರಸ್ತುತ ಭಾರತದಲ್ಲಿ ಮಹಿಳೆಯರ ವಿರುದ್ಧ ವೇಗವಾಗಿ ಹೆಚ್ಚುತ್ತಿರುವ ಅಪರಾಧ ಪ್ರಕರಣಗಳ ಪ್ರವೃತ್ತಿಯನ್ನು ತಿಳಿಸಲಾಗಿದೆ ಹಾಗೂ ಅದನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.
2. ಭಾರತದಲ್ಲಿ ಮಹಿಳೆಯರ ವಿರುದ್ಧ ಅಪರಾಧಗಳು ಹೆಚ್ಚಾಗಲು ಇರುವಂತಹ ಕಾರಣಗಳನ್ನು ಅನ್ವೇಷಿಸಲಾಗಿದೆ.
3. ಮಹಿಳೆಯರ ವಿರುದ್ಧದ ಅಪರಾಧಗಳನ್ನು ತಡೆಯಲು ಭಾರತದಲ್ಲಿ ಅಸ್ಥಿತ್ವದಲ್ಲಿರುವ ಕಾಯಿದೆ – ಕಾನೂನುಗಳನ್ನು ಅರ್ಥೈಸಿಕೊಳ್ಳಲಾಗಿದೆ.
4. ಮಹಿಳೆಯರ ಮೇಲಿನ ಅಪರಾಧವನ್ನು ನಿಯಂತ್ರಿಸುವಲ್ಲಿ ಸರ್ಕಾರಿ ಯಂತ್ರವು ಎಲ್ಲಿ ವಿಫಲವಾಗಿದೆ ಎಂಬುದನ್ನು ಗುರುತಿಸಲಾಗಿದೆ.

**ಅಧ್ಯಯನದ ವ್ಯಾಪ್ತಿ**

ಪ್ರಸ್ತುತ ಅಧ್ಯಯನವು ಉದಾಸೀನ ಮತ್ತು ನಿರ್ಲಕ್ಷ್ಯದ ಮನೋಭಾವದವರನ್ನು ಹೆಚ್ಚಿನ ರೀತಿಯಲ್ಲಿ ವ್ಯಾಪ್ತಿಗೆ ಒಳಗೊಳ್ಳುತ್ತದೆ. ಏಕೆಂದರೆ; ಇದು ಪ್ರಾಥಮಿಕವಾಗಿ ಮಹಿಳೆಯರ ಮೇಲಿನ ಪುರುಷ ಪ್ರಭುತ್ವದ ಶ್ರೇಷ್ಠತೆಯ ಸಾಮಾನ್ಯ ಅಂಗೀಕಾರದ ಪರಿಣಾಮವೇ ಆಗಿರುತ್ತದೆ. ಮಹಿಳೆಯರ ವಿರುದ್ಧದ ಹಿಂಸಾತ್ಮಕ ಕೃತ್ಯಗಳನ್ನು ಮಹಿಳೆಯರು ತಮ್ಮ ಧಾರ್ಮಿಕ ಕಾರಣದಿಂದ ಹಿಂಸಾತ್ಮಕವೆಂದು ಎಂದೂ ಕೂಡ ಪರಿಗಣಿಸಿಕೊಂಡಿರುವುದಿಲ್ಲ. ಆದ್ದರಿಂದಲೇ ಮೌಲ್ಯಗಳು ಮತ್ತು ವರ್ತನೆಗಳು ಮಹಿಳೆಯರ ಮೇಲಿನ ಅಪರಾಧದ ವಿಷಯವು ಖಾಸಗಿ ಸಮಸ್ಯೆಯಿಂದ ಸಾರ್ವಜನಿಕ ಸಮಸ್ಯೆಯಾಗಿಯೇ ರೂಪಾಂತರಗೊಂಡಿರುವುದು ಕೂಡ ಇತ್ತೀಚಿಗೆ ತಿಳಿದುಬಂದಿರುವ ಪ್ರಧಾನ ವಿಷಯವೇ ಆಗಿರುತ್ತದೆ. ಆದ ಕಾರಣ ಪ್ರಸ್ತುತ ಅಧ್ಯಯನದಲ್ಲಿ ಮಹಿಳೆಯರ ವಿರುದ್ಧದ ಅಪರಾಧ ಪ್ರವೃತ್ತಿಯನ್ನು ಹೆಚ್ಚಿಸುವಲ್ಲಿ ಇರುವಂತಹ ಕ್ರೂರತ್ವದ ವ್ಯಕ್ತಿಗಳ ಪ್ರಖರತೆಯನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಲಾಗಿದೆ. ಭಾರತದಲ್ಲಿ ಅಸ್ತಿತ್ವದಲ್ಲಿರುವಂತಹ ಕಾನೂನುಗಳು ಹಾಗೂ ಕಾಯಿದೆಗಳು ಪರಿಣಾಮವೂ ಮತ್ತು ಪ್ರಭಾವವೂ ಅಪರಾಧಗಳನ್ನು ಮತ್ತಷ್ಟು ನಿಯಂತ್ರಿಸಲು ಹಾಗೂ ಶಾಸನಬದ್ಧ ಆಯೋಗಗಳ ಮೂಲಕ ತಡೆಗಟ್ಟಲು ಕೂಡ ಪ್ರಧಾನ ಸಲಹೆಗಳನ್ನು ಅನುಸರಿಸಲಾಗುತ್ತದೆ. ಹಾಗಾಗಿಯೇ ಪ್ರಸ್ತುತ ಅಧ್ಯಯನವು ಭಾರತ ದೇಶದಲ್ಲಿನ ಮಹಿಳೆಯರ ವಿರುದ್ಧದ ಅಪರಾಧಗಳನ್ನು ಕುರಿತಂತೆ ಕೇಂದ್ರ ಸರ್ಕಾರದ ಭಾರತ ರಾಷ್ಟ್ರೀಯ ಅಪರಾಧ ಬ್ಯೂರೋ ವರದಿ ಇವರು ನೀಡಿರುವ 2009 –10 ರಿಂದ 2018 –19 ರವರೆಗಿನ ಹತ್ತು ವರ್ಷಗಳ ಅಂಕಿ–ಅಂಶಗಳನ್ನು ಈ ಮುಂದಿನಂತೆ ಸ್ಥೂಲವಾದ ವಿಮರ್ಶೆಗೆ ಒಳಪಡಿಸಲಾಗಿರುತ್ತದೆ.

**ಅಧ್ಯಯನದ ವಿಧಾನ**

ಪ್ರಸ್ತುತ ಅಧ್ಯಯನದಲ್ಲಿ ಐತಿಹಾಸಿಕ, ವಿಶ್ಲೇಷಣಾತ್ಮಕ, ವಿಮರ್ಶಾತ್ಮಕ, ವಿವರಣಾತ್ಮಕ, ಸಂಖ್ಯಾಶಾಸ್ತ್ರೀಯ ಹಾಗೂ ಅವಲೋಕನ ವಿಧಾನಗಳನ್ನು ಪ್ರಮುಖವಾಗಿ ಅಳವಡಿಸಿಕೊಳ್ಳಲಾಗಿದೆ. ಹಾಗೆಯೇ ಪ್ರಾಥಮಿಕ ಹಾಗೂ ಮಾಧ್ಯಮಿಕ ಮೂಲಗಳಿಂದ ಅಗತ್ಯ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಅಧ್ಯಯನಕ್ಕೆ ಪೂರಕವಾಗಿ ದೇಶ–ವಿದೇಶಗಳ ಮಟ್ಟದಲ್ಲಿ ಹೆಸರು ಗಳಿಸಿರುವಂತಹ ಚಿಂತಕರು, ಹೋರಾಟಗಾರರು, ಹವ್ಯಾಸಿ ಬರಹಗಾರರು ಸಂಶೋಧಿಸಿ, ರಚಿಸಿರುವ ಗ್ರಂಥಗಳು, ವರದಿಗಳು ಬಹುಮುಖ್ಯವಾಗಿ ಕೇಂದ್ರ ಸರ್ಕಾರವು ನೀಡಿರುವ ಅಪರಾಧದ ವರದಿಗಳು, ನಿಯತಕಾಲಿಕೆಗಳು, ದಿನಪತ್ರಿಕೆಗಳು, ಅಂತರ್ಜಾಲದ ಮಾಹಿತಿಗಳು, ಹೀಗೆ ವಿವಿಧ ಮೂಲಗಳಿಂದ ಹಾಗೂ ಸಮೀಕ್ಷೆಗಳಿಂದ ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಿ ಅವುಗಳನ್ನು ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

**ಆಧಾರ ಕಲ್ಪನೆ**

1. ಭಾರತದಲ್ಲಿ ಮಹಿಳಾ ವಿರುದ್ಧದ ಅಪರಾಧ ಪ್ರಕರಣಗಳು ಹೆಚ್ಚಾಗಿರುತ್ತವೆ.
2. ಭಾರತದಲ್ಲಿ ಮಹಿಳಾ ವಿರುದ್ಧ ಹೆಚ್ಚುತ್ತಿರುವ ಅಪರಾಧ ಪ್ರಕರಣಗಳನ್ನು ತಡೆಯುವಲ್ಲಿ ಸರ್ಕಾರಗಳು ಕಠಿಣ ಕ್ರಮಗಳನ್ನು ಜಾರಿಗೆ ತರುವುದು ಅನಿವಾರ್ಯ.
3. ಭಾರತದಲ್ಲಿರುವ ಮಹಿಳಾ ರಕ್ಷಣಾ ಹಾಗೂ ಭದ್ರತೆ ಕಾನೂನು ಕಾಯಿದೆಗಳು ಬಿಗಿಗೊಳ್ಳುವುದು ಅಗತ್ಯವಾಗಿದೆ.

**ಅಧ್ಯಯನದ ಪ್ರಾಮುಖ್ಯತೆ**

ಪ್ರಸ್ತುತ ಅಧ್ಯಯನವು ಭಾರತದಲ್ಲಿ ಮಹಿಳೆಯರಿಗೆ ಪ್ರಮುಖ ಸ್ಥಾನವನ್ನು ಸಿಂಧೂ ನದಿ ಬಯಲು ಕಣಿವೆಯ ನಾಗರೀಕತೆಯಲ್ಲಿ ಕೊಡಲಾಗಿತ್ತು. ಕಾಲಾನಂತರ ಅದು ಬದಲಾಗಿ ಮಾತೃ ಸಂಸ್ಕೃತಿಯಿಂದ ಪುರುಷ ಪ್ರಧಾನ ವ್ಯವಸ್ಥೆಗೆ ಬದಲಾಗಿರುತ್ತದೆ. ಹೀಗೆ ಬದಲಾಗಿರುವ ಭಾರತದಲ್ಲಿ ಮಹಿಳೆಯರು ತಮ್ಮ ಸ್ವಂತ ಕುಟುಂಬದಲ್ಲಿ ಮಾತ್ರವಲ್ಲದೇ, ಸಾರ್ವಜನಿಕವಾಗಿಯೂ ಬದುಕುವ ಪ್ರತಿ ಕ್ಷಣದಲ್ಲಿಯೂ ಕೂಡ ಎರಡನೇ ದರ್ಜೆಯ ಪ್ರಜೆಯಾಗಿ ಬದುಕುತ್ತಿದ್ದಾರೆ. ಈ ಕಾರಣಕ್ಕಾಗಿಯೇ ಮಹಿಳೆಯರು ಪುರುಷ ಪ್ರಧಾನ ವ್ಯವಸ್ಥೆಯಿಂದ ದೌರ್ಜನ್ಯ–ದಬ್ಬಾಳಿಕೆ ಸಾಮಾಜಿಕ ಹಿಂಸೆಗೆ ಒಳಗಾಗಿರುವ ಅನೇಕ ರೀತಿಯ ಶೋಷಣೆಯ ವಿಧಗಳನ್ನು ಕುರಿತು ಅಧ್ಯಯನವನ್ನು ಕೈಗೊಳ್ಳಲಾಗುತ್ತದೆ. ಅಂದರೆ; 2009 ರಿಂದ 2019 ರವರೆಗೆ ಮಹಿಳಾ ಅಪರಾಧದ ವಿರುದ್ಧದ ತಡೆಗೆ, ಆಳುವ

ಸರ್ಕಾರವು ಕೈಗೊಂಡಿರುವಂತಹ ಕಾನೂನಿನ ಕ್ರಮಗಳನ್ನು ತಿಳಿಯಪಡಿಸುವಲ್ಲಿ ಪ್ರಸ್ತುತ ಅಧ್ಯಯನವು ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ.

**ಮಹಿಳೆಯರ ವಿರುದ್ಧದ ಅಪರಾಧದ ಗ್ರಹಿಕೆ**

ಸಾಮಾಜಿಕ ಹಿಂಸೆ, ಅತ್ಯಾಚಾರ, ಚಿತ್ರಹಿಂಸೆ, ನಿಂಧನೆ, ಮೋಸ, ಕೊಲೆ, ದರೋಡೆ, ಮಾರಾಟದಂತಹ ಅಪರಾಧಗಳಿಗೆ ಮಹಿಳೆಯರು ಬಹುಮುಖ್ಯವಾಗಿ ಬಲಿಪಶುಗಳಾಗುತ್ತಿದ್ದಾರೆ. ಅದರಲ್ಲೂ ತಳಸಮುದಾಯದ ಮಹಿಳೆಯರು ಮಾತ್ರವೇ ಹೆಚ್ಚು. ಪ್ರಬಲ ಜಾತಿಗಳ ದಬ್ಬಾಳಿಕೆಗೆ ಹಾಗೂ ಕ್ರೌರ್ಯದಂತಹ ಮಾನಹಾನಿಗೆ ಹೆಚ್ಚು ಬಲಿಪಶುಗಳಾಗುತ್ತಿರುವುದನ್ನು ಗುರುತಿಸಬಹುದು. ಆದಾಗ್ಯೂ ಜಾತಿ ಪ್ರಭಾವವನ್ನು ಬಳಸಿಕೊಂಡು ತಳ ಸಮುದಾಯದ ಮಹಿಳೆಯರದೇ ಅಪರಾಧವೆಂಬಂತೆ ಅವರ ವಿರುದ್ಧ ಪ್ರಸ್ತುತ ದಿನದಲ್ಲಿ ಕಾನೂನು ವ್ಯವಸ್ಥೆಯನ್ನೇ ತಮಗೆ ಬೇಕಾದ ರೀತಿಯಲ್ಲಿ ದುರುಪಯೋಗಪಡಿಸಿಕೊಂಡು ಪೊಲೀಸ್ ಠಾಣೆ ಮತ್ತು ನ್ಯಾಯಾಲಯಗಳಲ್ಲಿ ದಾಖಲಿಸಲ್ಪಟ್ಟಿರುವ ಪ್ರಕರಣಗಳನ್ನು ಖಿಲಾಸೆಗೊಳಿಸಿ ನಿರ್ಭೀತಿಯಿಂದ ಜೀವಿಸುತ್ತಿರುವುದನ್ನು ಕೂಡ ಗುರುತಿಸಬಹುದು. ಇಂತಹ ನಿರ್ಧಿಷ್ಟವಾದ ನಿರ್ದೇಶಿತವಾಗಿರುವ ಮಹಿಳಾ ವಿರುದ್ಧದ ಅಪರಾಧಗಳನ್ನು ಈ ಮುಂದಿನಂತೆ ಎರಡು ರೀತಿಯ ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಲಾಗಿದೆ. ಅವುಗಳೆಂದರೆ;

1. ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಬರುವಂತಹ ಅಪರಾಧಗಳು (Indian Penal Code)
2. ವಿಶೇಷ ಮತ್ತು ಸ್ಥಳೀಯ ಕಾನೂನುಗಳ ಅಡಿಯಲ್ಲಿ ಬರುವಂತಹ ಅಪರಾಧಗಳು (Special Local Law's)

**ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಏಳು ಅಪರಾಧಗಳು ಬರುತ್ತವೆ. ಅವುಗಳೆಂದರೆ**

1. ಅತ್ಯಾಚಾರ – ವಿಧಿ 376 IPC
2. ಅಪಹರಣ – ವಿಧಿ 363–373 IPC
3. ವರದಕ್ಷಿಣೆ – ವಿಧಿ 304–B IPC
4. ಚಿತ್ರಹಿಂಸೆ – ದೈಹಿಕ ಮತ್ತು ಮಾನಸಿಕ, ವಿಧಿ 498 IPC
5. ಕಿರುಕುಳ – ವಿಧಿ 354 IPC
6. ಲೈಂಗಿಕ ಕಿರುಕುಳ – ವಿಧಿ 509 IPC
7. ಹುಡುಗಿಯರ ಆಮದು – ವಿಧಿ 366– B IPC ಗಳಾಗಿರುತ್ತವೆ.

ವಿಶೇಷ ಮತ್ತು ಸ್ಥಳೀಯ ಕಾನೂನುಗಳ ಅಡಿಯಲ್ಲಿನ ಅಪರಾಧಗಳು – ಭಾರತ ಸಂವಿಧಾನದಲ್ಲಿನ ಕಾನೂನುಗಳು ಲಿಂಗ ಸಂಬಂಧಿತ ವಿಷಯಕ್ಕೆ ನಿರ್ಧಿಷ್ಟವಾಗಿ ಇಲ್ಲದಿದ್ದರೂ ಕೂಡ ಮಹಿಳೆಯರ ಮೇಲೆ ಗಮನಾರ್ಹವಾಗಿ ಪರಿಣಾಮವನ್ನು ಬೀರುವ ಕಾನೂನಿನ ನಿಬಂಧನೆಗಳನ್ನು ನಿಯತಕಾಲಿಕವಾಗಿಯೇ ವರ್ಗೀಕರಿಸಲಾಗುವುದು. ಹಾಗೆಯೇ ಕಾಲಾನುಕ್ರಮದಲ್ಲಿ ಭಾರತದ ಕೇಂದ್ರ ಸರ್ಕಾರವೂ ಮಹಿಳೆಯರ ವಿಷಯವಾಗಿ ಉದಯೋನ್ಮುಖ ಅವಶ್ಯಕತೆಗಳಿಗೆ ಅನುಗುಣವಾಗಿ ತಿದ್ದುಪಡಿಗಳನ್ನು ತರಲಾಗುತ್ತದೆ. ಆದ್ದರಿಂದಲೇ ಭಾರತದಲ್ಲಿ ಮಹಿಳೆಯರು ಮತ್ತು ಅವರ ಸಮಷ್ಠಿ ಹಿತಾಸಕ್ತಿಗಳನ್ನು ಸಂರಕ್ಷಿಸುವ ಸಲುವಾಗಿಯೇ ವಿಶೇಷವಾಗಿರುವಂತಹ ನಿಬಂಧನೆಗಳನ್ನು ಹೊಂದಿರುವ ಅನೇಕ ರಕ್ಷಣಾ – ಭದ್ರತಾ ಕಾಯಿದೆ ಹಾಗೂ ಕಾನೂನುಗಳನ್ನು ಜಾರಿಗೆ ತರಲಾಗಿದೆ. ಈ ಕಾನೂನು ಹಾಗೂ ಕಾಯಿದೆಗಳ ಜೊತೆಗೆ ಮಹಿಳೆಯರ ವಿರುದ್ಧದ ಸಾಮಾಜಿಕ ಹಿಂಸೆಯ ಸ್ವರೂಪದ ಪರಿಕಲ್ಪನೆಯನ್ನು ಸ್ಪಷ್ಟಪಡಿಸುವುದು ಅಷ್ಟೇ ಮುಖ್ಯವಾಗಿರುತ್ತದೆ. ಆದ್ದರಿಂದಲೇ ಹಿಂಸೆಯ ಬಗೆಯನ್ನು ಪರಿಶೀಲಿಸಿದಾಗ; ಹಿಂಸೆಯು ಒಂದು ಜನ ಸಮುದಾಯದ ನೈತಿಕ ಔಪಚಾರಿಕ ಹೇಳಿಕೆಗಳಿಗೆ ಬಳಸುವಂತಹ ಖಂಡನೆಯ ನಡವಳಿಕೆಯೇ ಆಗಿರುತ್ತದೆ. ಹಾಗೆಯೇ ಈ ಬಗೆಯಲ್ಲಿ ಸಾಮಾಜಿಕ ಹಿಂಸೆಯನ್ನು ಪ್ರಾಮಾಣಿತ ಗುಂಪುಗಳ ನಡವಳಿಕೆಯ ಮಾನದಂಡಗಳಿಂದ ವಿಚಲನೆ ಎಂದು ತೆಗೆದುಕೊಂಡರೆ ಅದು ಸಂಕುಚಿತವಾಗಿ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳ ವ್ಯಾಪ್ತಿಯು ಬಹುವಿಸ್ತಾರ ಹಾಗೂ ವಿಶಾಲವಾಗಿಯೇ ಇರುತ್ತದೆ. ಹಿಂಸೆ ಎಂದರೆ; ದೈಹಿಕವಾಗಿ, ವೈಯಕ್ತಿವಾಗಿ ಹಲ್ಲೆ ಮಾಡುವ ಹಾಗೂ ಗಾಯವನ್ನು ಉಂಟು ಮಾಡುವ ಪದಕ್ಕೆ ಅನ್ವಯಿಸಲಾಗಿದೆ. ಏಕೆಂದರೆ, ಹಾನಿ ಅಥವಾ ಗಾಯವನ್ನು ಉಂಟು ಮಾಡುವ ಉದ್ದೇಶದಿಂದಲೇ ಯಾವುದೇ ವ್ಯಕ್ತಿಯನ್ನು ಹೊಡೆಯುವ ಕ್ರಿಯೆಗೆ ವಾಸ್ತವವಾಗಿ ಅದನ್ನು ದೈಹಿಕ ಹಿಂಸೆ ಎನ್ನುತ್ತಾರೆ. ಆದ್ದರಿಂದಲೇ ಹೀಗೆ ಒಬ್ಬ ಮಾನವನಿಗೆ ಗಾಯವನ್ನು ಉಂಟುಮಾಡುವ ಹೆಚ್ಚಿನ ಸಾಮರ್ಥ್ಯವಿರುವಂತಹ ಕೃತ್ಯಗಳು ಮತ್ತು ನಿಜವಾದ ಹೊಡೆಯುವಿಕೆಯನ್ನು ಒಳಗೊಂಡಿರದ ಮೌಖಿಕ ನಿಂದನೆ ಅಥವಾ ಮಾನಸಿಕ ಒತ್ತಡ ಸಂಕಟವನ್ನು ಒಳಗೊಂಡಿರುವ ಕೃತ್ಯಗಳೆ ಹೆಚ್ಚಾಗಿರುತ್ತವೆ ಎನ್ನಬಹುದು.

ವಾಸ್ತವವಾಗಿ ಹಿಂಸಾಚಾರವು ಬೆದರಿಕೆ ಅಥವಾ ಬಹಿರಂಗವಾಗಿ ಸಾಧಿಸಿದ ಬಲದ ಅನ್ವಯವು ಕ್ಷತಿಯನ್ನುಂಟು ಮಾಡಿರುವ ವ್ಯಕ್ತಿಗಳು, ಅವರ ಖ್ಯಾತಿಯ ನಾಶಕ್ಕೆ ಪ್ರಧಾನವಾಗಿ ಕಾರಣವಾಗಿರುತ್ತದೆ ಎಂದು ಹೇಳಬಹುದು. ಬಹುಮುಖ್ಯವಾಗಿ ಹಿಂಸೆಯ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳುವುದು ಮತ್ತು ಅದನ್ನು ಆಕ್ರಮಣ, ಬಲ ಮತ್ತು ಬಲಾತ್ಕಾರದಂತಹ ಅವೈಜ್ಞಾನಿಕ ಮನೋಕಲ್ಪನೆಗಳಿಂದ ಪತ್ಯೇಕಿಸುವುದು ಅಪೇಕ್ಷಣೀಯವಾಗಿರುತ್ತದೆ. ಇಂತಹ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಇರುವ ವಿವಾದಗಳಿಗೆ ಹೆಚ್ಚಿನ ರೀತಿಯಲ್ಲಿ ಸಿಲುಕಿಕೊಳ್ಳುವ ಭಯವು ಯಾವಾಗಲೂ ಮಾನವರಿಗೆ ಇದ್ದೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಅಪರಾಧ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯದ ಸಮಸ್ಯೆಯಲ್ಲಿನ ವಿಶಾಲವಾದ ಅಂಶಗಳನ್ನು ಅರ್ಥಮಾಡಿಕೊಳ್ಳುವ ಹಿಂಸೆಯನ್ನು ಮಾನವನ ದಿನನಿತ್ಯದ ವಿದ್ಯಮಾನವೆಂದು ಗುರುತಿಸಬೇಕು. ಒಟ್ಟಾರೆಯಾಗಿ ಸಾಮಾಜಿಕ ಹಿಂಸೆಯು ಮಾತ್ರವೇ ಪ್ರತಿಯೊಬ್ಬ ಮಹಿಳೆಗೆ ದೈಹಿಕವಾಗಿ, ಗಾಯಗೊಳಿಸುವುದು ಅಥವಾ ಭಾವನಾತ್ಮಕ ಆಘಾತಕ್ಕೆ ಒಳಗಾಗುವುದು ಹೀಗೆ ಎರಡನ್ನು ಉಂಟು ಮಾಡಿ ಆಕೆಯನ್ನು ಮಾನಸಿಕ ಹಾಗೂ ದೈಹಿಕವಾಗಿಯೂ ಕುಂಠಿತಗೊಳಿಸುತ್ತದೆ ಎಂಬುದೇ ಮುಖ್ಯವಾದ ಅಂಶವಾಗಿದೆ.

ಹೀಗೆ ಅತ್ಯಾಚಾರ, ಅಪಹರಣ, ಮಾನವನ ಸಾಗಾಣಿಕೆ, ಕೊಲೆ, ಅಪರಾಧ ಸಂಬಂಧಿತ ಹಿಂಸೆಯ ಎಲ್ಲಾ ಪ್ರಕರಣಗಳು ವರದಕ್ಷಿಣೆ, ಸಾವು, ಮಡದಿಯನ್ನು ಹೊಡೆಯುವುದು, ಲೈಂಗಿಕ ದೌರ್ಜನ್ಯ, ವಿಧವೆಯ ಮೇಲೆ ದೌರ್ಜನ್ಯ ಮತ್ತು ವಯೋವೃದ್ಧ ಮಹಿಳೆಯರಿಗೆ ಕಿರುಕುಳ ಮತ್ತು ಅವರ ಕೊಲೆ, ಕೌಟುಂಬಿಕ ಹಿಂಸಾಚಾರ, ಮಾನಸಿಕವಾಗಿ ಅಪಮಾನಗೊಳಿಸುವುದು. ತನ್ನ ಮಡದಿ ಮತ್ತು ಸೊಸೆಯನ್ನು ಹೆಣ್ಣು ಭ್ರೂಣ ಹತ್ಯೆಗೆ ಬಲವಂತವಾಗಿಯೇ ಒತ್ತಾಯಿಸುವುದು. ಹೀಗೆ ಇವೆಲ್ಲವನ್ನು ಬಹುಸೂಕ್ಷ್ಮವಾಗಿ ಗಮನಿಸಿದಾಗ; ಅಪರಾಧಗಳ ಸಂಖ್ಯೆಯು ಮಾತ್ರ ದಿನೆದಿನೇ ಪ್ರಸ್ತುತ ದಿನಗಳಲ್ಲೂ ಕೂಡ ಹೆಚ್ಚಾಗುತ್ತಿರುವುದನ್ನು ಕಾಣಬಹುದು. ಹಾಗಾಗಿ ಈ ಕೆಳಗಿನಂತೆ ಶೇಕಡವಾರು ಮಹಿಳೆಯರ ವಿರುದ್ಧ ಎಷ್ಟು ಅಪರಾಧಗಳಾಗಿವೆ ಎಂಬುದನ್ನು ಈ ಮುಂದಿನ ಏಳು ಕೋಷ್ಠಕಗಳಲ್ಲಿ ಭಾರತದಲ್ಲಿ ಮಹಿಳಾ ವಿರುದ್ಧದ ಅಪರಾಧಗಳು ಮತ್ತು ರಾಷ್ಟ್ರೀಯ ಅಪರಾಧ ಬ್ಯೂರೋ ವಿಭಾಗದ ಹತ್ತು ವರ್ಷಗಳ ವರದಿಗಳಿಂದ ಲಭ್ಯವಾಗಿರುವ ದತ್ತಾಂಶಗಳನ್ನು ಈ ಮುಂದಿನಂತೆ ವಿಶ್ಲೇಷಣೆಗೆ ಒಳಪಡಿಸಲಾಗಿರುತ್ತದೆ.

**ಕೋಷ್ಟಕ 1:** ಅಖಿಲ ಭಾರತ ಮಟ್ಟದ ಹತ್ತು ವರ್ಷಗಳಲ್ಲಿ ದಾಖಲಾಗಿರುವ ಅಪರಾಧ ಪ್ರಕರಣಗಳ ವಿವರ

| ಕ್ರ. ಸಂ. | ವರ್ಷಗಳು | ದೇಶದಲ್ಲಿ ದಾಖಲಾಗಿರುವ ಒಟ್ಟು ಅಪರಾಧ ಪ್ರಕರಣಗಳು | ಮಹಿಳಾ ವಿರುದ್ಧ ದಾಖಲಾಗಿರುವ ಅಪರಾಧ ಪ್ರಕರಣಗಳು | ಶೇಕಡವಾರು ಪ್ರಕರಣಗಳು |
|---|---|---|---|---|
| 1 | 2009–10 | 66,75,217 | 203804 | 9.6% |
| 2 | 2010–11 | 6750748 | 213583 | 9.6% |
| 3 | 2011–12 | 6252729 | 228650 | 9.8% |
| 4 | 2012–13 | 6041559 | 244270 | 10.2% |
| 5 | 2013–14 | 6640378 | 309546 | 11.7% |
| 6 | 2014–15 | 7229193 | 337922 | 11.9% |
| 7 | 2015–16 | 7326099 | 327394 | 11.1% |
| 8 | 2016–17 | 4531515 | 338954 | 14.25% |
| 9 | 2017–18 | 5007044 | 359849 | 13.91% |
| 10 | 2018–19 | 5074635 | 378277 | 13.41% |

**ಆಧಾರ:** ಭಾರತ ರಾಷ್ಟ್ರೀಯ ಅಪರಾಧ ಬ್ಯೂರೋ ವರದಿ, ನವದೆಹಲಿ, 2009–10 ರಿಂದ 2018–19ರವರೆಗಿನ ವಾರ್ಷಿಕ ವರದಿ

ಈ ಮೇಲಿನ ಕೋಷ್ಟಕ –1ರಲ್ಲಿ ಭಾರತ ರಾಷ್ಟ್ರೀಯ ಅಪರಾಧ ಬ್ಯೂರೋ ವರದಿಯಲ್ಲಿ 2009–10 ರಿಂದ 2018–19 ರವರೆಗಿನ ಹತ್ತು ವರ್ಷಗಳಲ್ಲಿ ಭಾರತ ದೇಶದಲ್ಲಿ ದಾಖಲಾಗಿರುವ ಒಟ್ಟು ಅಪರಾಧ ಪ್ರಕರಣಗಳು, ಅದರಲ್ಲಿ ಮಹಿಳಾ ವಿರುದ್ಧದ ಅಪರಾಧಗಳು ಮತ್ತು ಅದರ ಶೇಕಡವಾರು ಪ್ರಮಾಣವನ್ನು ದಾಖಲಿಸಲಿಕರಿಸಿ ಮತ್ತು ವಿವರಣೆಯನ್ನು ನೀಡಲಾಗಿದೆ. ಅದರಂತೆಯೇ 2009–10 ರಲ್ಲಿ 66,75,217 ಒಟ್ಟು ಅಪರಾಧ ಪ್ರಕರಣಗಳು ದಾಖಲಾಗಿ, ಅದರಲ್ಲಿ 20,38,04 ಮಹಿಳಾ ವಿರುದ್ಧದ ಅಪರಾಧ ಪ್ರಕರಣಗಳಾಗಿ, ಇದರಲ್ಲಿ ಒಟ್ಟಾರೆಯ ಪ್ರಕರಣದ ಶೇಕಡಾ 9.6ರಷ್ಟಿದೆ. 2010–11 ರಲ್ಲಿ 6750748 ಒಟ್ಟು ಅಪರಾಧ ಪ್ರಕರಣಗಳಾಗಿದ್ದು, ಇದರಲ್ಲಿ 213583 ಮಹಿಳಾ ವಿರುದ್ಧದ ಅಪರಾಧ ಪ್ರಕರಣಗಳಾಗಿ, ಇದರಲ್ಲಿ ಒಟ್ಟಾರೆ, ಪ್ರಕರಣದ ಶೇಕಡಾ 9.6ರಷ್ಟಿದ್ದು ಹಿಂದಿನ ವರ್ಷದಷ್ಟೆಯೇ ಇರುತ್ತದೆ ಎಂಬುದು ಅಂಕಿ–ಅಂಶಗಳಿಂದ ದೃಢಪಟ್ಟಿರುತ್ತದೆ. 2011–12 ರಲ್ಲಿ 6252729 ಒಟ್ಟು ಅಪರಾಧ ಪ್ರಕರಣಗಳಿದ್ದು, ಇದರಲ್ಲಿ 228650 ಮಹಿಳಾ ವಿರುದ್ಧದ ಅಪರಾಧ ಪ್ರಕರಣಗಳಾಗಿ, ಒಟ್ಟಾರೆ ಅಪರಾಧ ಪ್ರಕರಣದಲ್ಲಿ ಶೇಕಡಾ 9.8 ರಷ್ಟಿದೆ. ಅಂದರೆ ಹಿಂದಿನ ವರ್ಷಕ್ಕಿಂತ ಈ ವರ್ಷ ಶೇಕಡಾ 0.2 ರಷ್ಟು ಪ್ರಕರಣಗಳು ಹೆಚ್ಚಾಗಿವೆ ಎಂಬುದು ತಿಳಿದುಬರುತ್ತದೆ.

2012–13 ರಲ್ಲಿ 6041559 ಒಟ್ಟು ಅಪರಾಧ ಪ್ರಕರಣಗಳಿದ್ದು, ಇದರಲ್ಲಿ 244270 ಮಹಿಳಾ ವಿರುದ್ಧದ ಅಪರಾಧ ಪ್ರಕರಣಗಳಾಗಿ, ಒಟ್ಟಾರೆ ದಾಖಲಾಗಿರುವ ಪ್ರಕರಣದಲ್ಲಿ ಶೇಕಡಾ 10.2 ರಷ್ಟಿದೆ. 2013–14 ರಲ್ಲಿ 6640378 ಒಟ್ಟು ಅಪರಾಧ ಪ್ರಕರಣಗಳಿದ್ದು, ಇದರಲ್ಲಿ 309546 ಮಹಿಳಾ ವಿರುದ್ಧದ ಅಪರಾಧ ಪ್ರಕರಣಗಳಾಗಿ, ಒಟ್ಟಾರೆ ಪ್ರಕರಣದ ಶೇಕಡ 11.7 ರಷ್ಟಿದೆ. ಈ ವರ್ಷದಲ್ಲಿ ಶೇಕಡಾ 1.5ರಷ್ಟು ಅಪರಾಧ ಪ್ರಕರಣಗಳು ಹೆಚ್ಚಾಗಿರುತ್ತವೆ. 2014–15 ರಲ್ಲಿ 7229193 ಒಟ್ಟು ಅಪರಾಧ ಪ್ರಕರಣಗಳಿದ್ದು, ಇದರಲ್ಲಿ 337922 ಮಹಿಳಾ ವಿರುದ್ಧದ ಅಪರಾಧ ಪ್ರಕರಣಗಳಾಗಿವೆ. ಇದರಲ್ಲಿ ಒಟ್ಟಾರೆ ಪ್ರಕರಣದ ಶೇಕಡ 11.9 ರಷ್ಟಿದೆ. ಈ ವರ್ಷವು ಕೂಡ ಸಾಕಷ್ಟು ಮಹಿಳಾ ವಿರುದ್ಧದ ಪ್ರಕರಣಗಳು ಹೆಚ್ಚಾಗಿರುವುದು ಕಂಡುಬರುತ್ತದೆ. 2015–16 ರಲ್ಲಿ 7326099 ಒಟ್ಟು ಅಪರಾಧ ಪ್ರಕರಣಗಳಿದ್ದು, ಇದರಲ್ಲಿ 327394 ಮಹಿಳಾ ವಿರುದ್ಧದ ಅಪರಾಧ ಪ್ರಕರಣಗಳಿವೆ. ಆದರೆ, ಒಟ್ಟಾರೆ ಪ್ರಕರಣದ ಶೇಕಡ 11.1ರಷ್ಟಿದೆ. ಈ ವರ್ಷ ಮಾತ್ರ ಶೇಕಡಾ 0.8 ರಷ್ಟು ಪ್ರಕರಣಗಳು ಕಡಿಮೆಯಾಗಿವೆ. 2016–17 ರಲ್ಲಿ 4531515 ಒಟ್ಟು ಅಪರಾಧ ಪ್ರಕರಣಗಳಿದ್ದು, ಇದರಲ್ಲಿ 338954 ಮಹಿಳಾ ವಿರುದ್ಧದ ಅಪರಾಧ ಪ್ರಕರಣಗಳಿವೆ. ಇದರಲ್ಲಿ ಒಟ್ಟಾರೆ ಪ್ರಕರಣದ ಶೇಕಡ 14.25 ರಷ್ಟಾಗಿರುತ್ತದೆ. ಈ ವರ್ಷದಲ್ಲಿ ಹಿಂದಿನ ವರ್ಷಗಳ ಪ್ರಕರಣಗಳಿಗಿಂತಲೂ ಶೇಕಡಾ 3ರಷ್ಟು ಹೆಚ್ಚಾಗಿವೆ. 2017–18 ರಲ್ಲಿ 5007044 ಒಟ್ಟು ಅಪರಾಧ ಪ್ರಕರಣಗಳಿದ್ದು, ಇದರಲ್ಲಿ 359849 ಮಹಿಳಾ ವಿರುದ್ಧದ ಅಪರಾಧ ಪ್ರಕರಣಗಳಿವೆ. ಇದರಲ್ಲಿ ಒಟ್ಟಾರೆ ಪ್ರಕರಣದ ಶೇಕಡ 13.91 ರಷ್ಟಾಗಿದೆ. ಹಿಂದಿನ ವರ್ಷಕ್ಕಿಂತ ಶೇಕಡಾ 0.34 ರಷ್ಟು ಪ್ರಕರಣಗಳು ಕಡಿಮೆಯಾಗಿವೆ. 2018–19 ರಲ್ಲಿ 5074635 ಒಟ್ಟು ಅಪರಾಧ ಪ್ರಕರಣಗಳಿದ್ದು, ಇದರಲ್ಲಿ 378277 ಮಹಿಳಾ ವಿರುದ್ಧದ ಅಪರಾಧ ಪ್ರಕರಣಗಳಿವೆ. ಇದರಲ್ಲಿ ಒಟ್ಟಾರೆ ಪ್ರಕರಣದ ಶೇಕಡ 13.41 ರಷ್ಟಾಗಿದೆ. ಅಂದರೆ ಹಿಂದಿನ ವರ್ಷಕ್ಕಿಂತ 0.5ರಷ್ಟು ಪ್ರಕರಣಗಳು ಕಡಿಮೆಯಾಗಿವೆ. ಒಟ್ಟಾರೆಯಾಗಿ, ಈ ಮೇಲಿನ ಕೋಷ್ಟಕದಲ್ಲಿ ದಾಖಲಿಸಿರುವ ಅಂಕಿ – ಅಂಶಗಳು ರಾಷ್ಟ್ರವನ್ನು ಆಳಿದ ಸರ್ಕಾರಗಳ ಗೃಹ ಇಲಾಖೆಯು ನೀಡಿರುವ ಹತ್ತು ವರ್ಷಗಳ ವಾರ್ಷಿಕ ವರದಿಯನ್ನು ಆಧರಿಸಿರುತ್ತದೆ. ಈ ಅವಧಿಯಲ್ಲಿನ ಅಪರಾಧ ಪ್ರಕರಣಗಳಲ್ಲಿ ವ್ಯತ್ಯಾಸವನ್ನು ಕೂಡ ಗುರುತಿಸಲಾಗಿದೆ. ಅಂದರೆ, 2013–14 ರಲ್ಲಿ 6640378 ರಷ್ಟು ಪ್ರಕರಣಗಳು ದಾಖಲಾಗಿರುತ್ತವೆ. ಆದರೆ 2014–15ನೇ ಸಾಲಿಗೆ 7229193 ರಷ್ಟು ಆಗಿರುತ್ತದೆ. ಆದ್ದರಿಂದಲೇ ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ; ಒಂದೇ ವರ್ಷದ ಅವಧಿಯಲ್ಲಿ ಸರಿಸುಮಾರು 588815 ಅಪರಾಧ ಪ್ರಕರಣಗಳು ಹೆಚ್ಚಾಗಿರುತ್ತವೆ ಎಂಬುದು ಮಾತ್ರ ಆತಂಕಕ್ಕೆ ಕಾರಣವಾಗಿರುತ್ತದೆ. ಹಾಗಯೇ ಇದೇ ಕೋಷ್ಟಕದಲ್ಲಿ ಮಹಿಳೆಯರ ವಿರುದ್ಧದ ಅಪರಾಧ ಪ್ರಕರಣಗಳನ್ನು ಕೂಡ ಅವಲೋಕಿಸಿದಾಗ ಹತ್ತು ವರ್ಷಗಳ ಅವಧಿಯಲ್ಲಿ ಪ್ರತಿ ವರ್ಷದಿಂದ ವರ್ಷಕ್ಕೆ ಅಪರಾಧಗಳು ಹೆಚ್ಚಾಗಿರುವುದು ಕಂಡುಬಂದಿರುತ್ತದೆ. ಹಾಗಾಗಿ ಇದೆಲ್ಲವನ್ನು ಗಮನಿಸಿದಾಗ; ಜಗತ್ತಿಗೆ ಭವ್ಯ ಪರಂಪರೆಯ ಮಾತೃ ಪ್ರಧಾನ ವ್ಯವಸ್ಥೆಯನ್ನು ಸಾರಿರುವ ನಮ್ಮ ಭಾರತ ದೇಶ. ಈ ದೇಶದಲ್ಲಿನ ಮಹಿಳೆಯರಿಗೆ ಅದೆಷ್ಟೋ ಕಾನೂನುಗಳನ್ನು ರಚಿಸಿ ಜಾರಿ ಮಾಡಿದರು ಸಹಾ ಮಹಿಳೆಯರಿಗೆ ರಕ್ಷಣೆ ಮತ್ತು ಭದ್ರತೆಯು ಇಲ್ಲದಿರುವುದನ್ನು ಪ್ರಸ್ತುತ ಅಧ್ಯಯನವು ಗುರುತಿಸಿ ವಿಮರ್ಶೆಯ ಮೂಲಕ ಸಾದರಪಡಿಸುತ್ತಿದೆ. ಇದಲ್ಲದೆ ಮಹಿಳೆಯರ ಬಗೆಗೆ ಆಳುವ ಸರ್ಕಾರಗಳಿಗೆ ಇರುವಂತಹ ಮನೋಧೋರಣೆಯು ಕೂಡ ಕಂಡುಬರುತ್ತದೆ.

**ಕೋಷ್ಟಕ 2:** ಮಹಿಳಾ ವಿರುದ್ಧದ ಅಪರಾಧಗಳ ಪ್ರಕರಣಗಳ ವಿವರ

| ಕ್ರ.ಸಂ | ವರ್ಷಗಳು | ಮಹಿಳಾ ವಿರುದ್ಧದ ಅಪರಾಧಗಳಲ್ಲಿ ದಾಖಲಾದ ಪ್ರಕರಣಗಳು | IPC ಅಡಿಯಲ್ಲಿ ದಾಖಲಾದ ಪ್ರಕರಣಗಳ ದರ | ಅಪರಾಧದ ದರ | ಚಾರ್ಜ್ ಸೀಟ್ | ಶಿಕ್ಷೆಯ ಪ್ರಮಾಣ |
|---|---|---|---|---|---|---|
| 1 | 2009–10 | 203804 | 9.6 | 17.4 | 92.1 | 27.8 |
| 2 | 2010–11 | 213583 | 9.6 | 18.0 | 92.0 | 27.8 |
| 3 | 2011–12 | 228650 | 9.8 | 18.9 | 92.0 | 26.9 |
| 4 | 2012–13 | 244270 | 10.2 | 41.7 | 91.7 | 21.3 |
| 5 | 2013–14 | 309546 | 11.7 | 52.2 | 90.5 | 22.4 |
| 6 | 2014–15 | 337922 | 11.9 | 56.3 | 91.0 | 21.3 |
| 7 | 2015–16 | 327394 | 11.1 | 53.9 | 89.4 | 21.7 |
| 8 | 2016–17 | 338954 | 14.25 | 58.8 | 92.1 | 22.1 |
| 9 | 2017–18 | 359849 | 13.91 | 57.9 | 90.3 | 21.5 |
| 10 | 2018–19 | 378277 | 13.41 | 58.8 | 92.2 | 25.2 |

**ಆಧಾರ:** ಭಾರತ ರಾಷ್ಟ್ರೀಯ ಅಪರಾಧ ಬ್ಯೂರೋ ವರದಿ, ನವದೆಹಲಿ, ವಾರ್ಷಿಕ ವರದಿ 2009–10 ರಿಂದ 2018–19ರವರೆಗೆ

ಈ ಮೇಲಿನ ಕೋಷ್ಟಕ – 2 ರಲ್ಲಿ 2009–10 ರಿಂದ 2018–19ರವರೆಗಿನ ಮಹಿಳಾ ವಿರುದ್ಧದ ದಾಖಲಾಗಿರುವ ಅಪರಾಧದ ಪ್ರಕರಣಗಳು, ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರ, ಅಪರಾಧದ ದರ, ಚಾರ್ಜ್‌ಸೀಟ್ ತಯಾರಿಕೆ ಮತ್ತು ಸಲ್ಲಿಕೆ ಹಾಗೂ ವಿಧಿಸಿರುವ ಶಿಕ್ಷೆಯ ಪ್ರಮಾಣವನ್ನು ದಾಖಲಿಕರಿಸಲಾಗಿದೆ. ಅದರಂತೆಯೇ 2009–10ರಲ್ಲಿ 203804 ಒಟ್ಟು ಮಹಿಳಾ ವಿರುದ್ಧದ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ ಶೇಕಡಾ 9.6 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿರುತ್ತದೆ. ಇದರಲ್ಲಿ ಅಪರಾಧ ಪ್ರಕರಣದ ದರವು ಶೇಕಡ 17.4 ರಷ್ಟಿದ್ದು, ಇದರಲ್ಲಿ 92.1 ರಷ್ಟು ಚಾರ್ಜ್‌ಸೀಟ್ ಸಲ್ಲಿಕೆಯಾಗಿ, ಅದರ ಅನುಗುಣವಾಗಿ ಶೇಕಡಾ 27.8 ರಷ್ಟು ಮಾತ್ರ ಶಿಕ್ಷೆಯಾಗಿರುತ್ತದೆ. 2010–11 ರಲ್ಲಿ 213583 ಒಟ್ಟು ಮಹಿಳಾ ವಿರುದ್ಧದ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ ಶೇಕಡಾ 9.6ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿರುತ್ತದೆ. ಇದರಲ್ಲಿ ಅಪರಾಧ ಪ್ರಕರಣದ ದರವು ಶೇಕಡ 18.0ರಷ್ಟಿದ್ದು, ಇದರಲ್ಲಿ ಶೇಕಡಾ 92.0 ರಷ್ಟು ಚಾರ್ಜ್‌ಸೀಟ್ ಸಲ್ಲಿಕೆಯಾಗಿ, ಅದರಲ್ಲಿ ಶೇಕಡಾ 27.8 ರಷ್ಟು ಮಾತ್ರ ಶಿಕ್ಷೆ ವಿಧಿಸಲಾಗಿದೆ. 2011–12 ರಲ್ಲಿ 228650 ಒಟ್ಟು ಮಹಿಳಾ ವಿರುದ್ಧದ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ ಶೇಕಡಾ 9.8ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿರುತ್ತದೆ. ಇದರಲ್ಲಿ ಅಪರಾಧ ಪ್ರಕರಣದ ದರ ಶೇಕಡ 18.9 ರಷ್ಟಿದ್ದು, ಇದರಲ್ಲಿ ಶೇಕಡಾ 92.0 ರಷ್ಟು ಚಾರ್ಜ್‌ಸೀಟ್ ಸಲ್ಲಿಕೆಯಾಗಿ, ಅದರಲ್ಲಿ ಶೇಕಡಾ 27.9 ರಷ್ಟು ಮಾತ್ರ ಶಿಕ್ಷೆಯಾಗಿದೆ. 2012–13ರಲ್ಲಿ 244270 ಒಟ್ಟು ಮಹಿಳಾ ವಿರುದ್ಧದ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ ಶೇಕಡಾ 10.2 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿರುತ್ತದೆ. ಇದರಲ್ಲಿ ಅಪರಾಧ ಪ್ರಕರಣದ ದರ ಶೇಕಡ 41.7 ರಷ್ಟಿದ್ದು, ಅದರಲ್ಲಿ ಶೇಕಡ 91.7 ರಷ್ಟು ಚಾರ್ಜ್‌ಸೀಟ್ ಸಲ್ಲಿಕೆಯಾಗಿ, ಶೇಕಡಾ 21.3 ರಷ್ಟು ಮಾತ್ರ ಶಿಕ್ಷೆಯಾಗಿದೆ. 2013–14 ರಲ್ಲಿ 309546 ಒಟ್ಟು ಮಹಿಳಾ ವಿರುದ್ಧದ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ ಶೇಕಡಾ 11.7 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿರುತ್ತದೆ. ಇದರಲ್ಲಿ ಅಪರಾಧ ಪ್ರಕರಣದ ದರ ಶೇಕಡಾ 52.2 ರಷ್ಟಿದ್ದು, ಇದರಲ್ಲಿ ಶೇಕಡ 90.5 ರಷ್ಟು ಚಾರ್ಜ್‌ಸೀಟ್ ಸಲ್ಲಿಕೆಯಾಗಿ ಶೇಕಡಾ 22.4 ರಷ್ಟು ಶಿಕ್ಷೆಯಾಗಿದೆ. 2014–15ರಲ್ಲಿ 337922 ಒಟ್ಟು ಮಹಿಳಾ ವಿರುದ್ಧದ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ ಶೇಕಡಾ 11.9 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿರುತ್ತದೆ. ಇದರಲ್ಲಿ ಅಪರಾಧ ಪ್ರಕರಣದ ದರ ಶೇಕಡಾ 56.3 ರಷ್ಟಿದ್ದು, ಇದರಲ್ಲಿ ಶೇಕಡಾ 91.0 ರಷ್ಟು ಚಾರ್ಜ್‌ಸೀಟ್ ಸಲ್ಲಿಕೆಯಾಗಿ ಶೇಕಡಾ 21.3 ರಷ್ಟು ಶಿಕ್ಷೆಯಾಗಿದೆ. 2015–16 ರಲ್ಲಿ 327394 ಒಟ್ಟು ಮಹಿಳಾ ವಿರುದ್ಧದ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ ಶೇಕಡಾ 11.1 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿರುತ್ತದೆ. ಇದರಲ್ಲಿ ಅಪರಾಧ ಪ್ರಕರಣದ ದರ ಶೇಕಡಾ 53.9 ರಷ್ಟಿದ್ದು, ಇದರಲ್ಲಿ ಶೇಕಡಾ 89.4 ರಷ್ಟು ಚಾರ್ಜ್‌ಸೀಟ್ ಸಲ್ಲಿಕೆಯಾಗಿ, ಶೇಕಡಾ 21.7 ರಷ್ಟು ಮಾತ್ರ ಶಿಕ್ಷೆಯಾಗಿದೆ. 2016–17 ರಲ್ಲಿ 338954 ಒಟ್ಟು ಮಹಿಳಾ ವಿರುದ್ಧದ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ ಶೇಕಡಾ 14.25 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿರುತ್ತದೆ. ಇದರಲ್ಲಿ ಅಪರಾಧ ಪ್ರಕರಣದ ದರ ಶೇಕಡಾ 58.8ರಷ್ಟಿದ್ದು, ಇದರಲ್ಲಿ ಶೇಕಡಾ 92.1 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ, ಶೇಕಡಾ 21.1 ರಷ್ಟು ಮಾತ್ರ ಶಿಕ್ಷೆಯಾಗಿದೆ. 2017–18 ರಲ್ಲಿ 359849 ಒಟ್ಟು ಮಹಿಳಾ ವಿರುದ್ಧದ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ ಶೇಕಡಾ 13.91 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿರುತ್ತದೆ. ಇದರಲ್ಲಿ ಅಪರಾಧ ಪ್ರಕರಣದ ದರ ಶೇಕಡಾ 57.9 ರಷ್ಟಿದ್ದು, ಇದರಲ್ಲಿ ಶೇಕಡಾ 90.3 ರಷ್ಟು ಚಾರ್ಜ್‌ಸೀಟ್ ಸಲ್ಲಿಕೆಯಾಗಿ ಶೇಕಡಾ 21.5 ರಷ್ಟು ಶಿಕ್ಷೆಯಾಗಿದೆ. 2018–19 ರಲ್ಲಿ 378277 ಒಟ್ಟು ಮಹಿಳಾ ವಿರುದ್ಧದ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ ಶೇಕಡಾ 13.41 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿರುತ್ತದೆ. ಇದರಲ್ಲಿ ಅಪರಾಧ ಪ್ರಕರಣದ ದರ ಶೇಕಡಾ 58.8ರಷ್ಟಿದ್ದು, ಇದರಲ್ಲಿ ಶೇಕಡಾ 92.2 ರಷ್ಟು ಚಾರ್ಜ್‌ಸೀಟ್ ಸಲ್ಲಿಕೆಯಾಗಿದ್ದು, ಶೇಕಡಾ 25.2 ರಷ್ಟು ಮಾತ್ರ ಶಿಕ್ಷೆಯಾಗಿರುತ್ತದೆ.

ಒಟ್ಟಾರೆಯಾಗಿ, ಮಹಿಳಾ ವಿರುದ್ಧದ ಅಪರಾಧ ಪ್ರಕರಣಗಳು ಸಾಕಷ್ಟು ಪ್ರಮಾಣದಲ್ಲಿ ದಾಖಲಾಗಿದ್ದು, ಚಾರ್ಜ್‌ಸೀಟ್‌ನ್ನು ಶೇಕಡಾ 90 ಕ್ಕಿಂತ ಹೆಚ್ಚು ಸಲ್ಲಿಸಲಾಗಿದೆ. ಆದರೆ ಇದರಲ್ಲಿ ಶಿಕ್ಷೆಯ ಪ್ರಮಾಣ ಮಾತ್ರ ಶೇಕಡಾ 25ಕ್ಕಿಂತ ಕಡಿಮೆ ಇರುವುದು ಮಾತ್ರ ಒಂದು ದುರಂತದ ಸಂಗತಿಯೇ ಆಗಿರುತ್ತದೆ. ಇದರಿಂದ ಅಪರಾಧ ಮಾಡುವವರಿಗೆ ಭಯವೇ ಇಲ್ಲದಂತಾಗಿರುತ್ತದೆ.

**ಕೋಷ್ಟಕ 3:** ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳಗಳ ವಿವರ

| ಕ್ರ.ಸಂ | ವರ್ಷಗಳು | ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ಪ್ರಕರಣಗಳು | IPC ಅಡಿಯಲ್ಲಿ ದಾಖಲಾದ ಪ್ರಕರಣಗಳ ದರ | ಅಪರಾಧದ ದರ | ಚಾರ್ಜ್ ಸೀಟ್ | ಶಿಕ್ಷೆಯ ಪ್ರಮಾಣ |
|---|---|---|---|---|---|---|
| 1 | 2009–10 | 11009 | 0.5 | 0.9 | 96.6 | 49.2 |
| 2 | 2010–11 | 9961 | 0.4 | 0.8 | 86.7 | 52.0 |
| 3 | 2011–12 | 8570 | 0.4 | 0.7 | 96.4 | 45.8 |
| 4 | 2012–13 | 9173 | 0.4 | 1.6 | 96.1 | 36.9 |
| 5 | 2013–14 | 12589 | 0.5 | 2.1 | 96.1 | 32.0 |
| 6 | 2014–15 | 18376 | 0.5 | 1.8 | 95.2 | 32.1 |
| 7 | 2015–16 | 19267 | 0.6 | 2.0 | 96.1 | 31.5 |
| 8 | 2016–17 | 27344 | 0.3 | 1.2 | 95.4 | 35.0 |
| 9 | 2017–18 | 20948 | 0.4 | 2.0 | 96.2 | 37.2 |
| 10 | 2018–19 | 20962 | 0.5 | 0.9 | 97.0 | 34.1 |

**ಆಧಾರ:** ಭಾರತ ರಾಷ್ಟ್ರೀಯ ಅಪರಾಧ ಬ್ಯೂರೋ ವರದಿ, ನವದೆಹಲಿ, ವಾರ್ಷಿಕ ವರದಿ 2009 –10 ರಿಂದ 2018 –19ರವರೆಗೆ

ಈ ಮೇಲಿನ ಕೋಷ್ಠಕ–3ರಲ್ಲಿ 2009–10 ರಿಂದ 2018–19 ರವರೆಗಿನ 10 ವರ್ಷಗಳ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ಅಪರಾಧಗಳು, ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರ, ಅಪರಾಧದ ದರ, ಚಾರ್ಜ್ ಸೀಟ್ ತಯಾರಿಕೆ, ಸಲ್ಲಿಕೆ ಮತ್ತು ಶಿಕ್ಷೆಯ ಪ್ರಮಾಣವನ್ನು ಕೂಡ ದಾಖಲಿಸಿರುತ್ತದೆ. 2009–10 ರಲ್ಲಿ 11009 ಒಟ್ಟು ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ ಶೇಕಡಾ 0.5 ರಷ್ಟು ಮಾತ್ರ ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿರುತ್ತದೆ. ಇದರಲ್ಲಿ ಅಪರಾಧ ಪ್ರಕರಣದ ದರ ಶೇಕಡಾ 0.9 ರಷ್ಟಿದ್ದು, ಅದರಲ್ಲಿಯೂ ಶೇಕಡಾ 96.6 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ, ಶೇಕಡಾ 49.2 ರಷ್ಟು ಮಾತ್ರ ಶಿಕ್ಷೆಯಾಗಿದೆ. 2010–11 ರಲ್ಲಿ 9961 ಒಟ್ಟು ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ಅಪರಾಧಗಳು ದಾಖಲಾಗಿದ್ದು, ಇದರಲ್ಲಿ ಶೇಕಡಾ 0.4 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿರುತ್ತದೆ, ಇದರಲ್ಲಿ ಅಪರಾಧ ಪ್ರಕರಣದ ದರ ಶೇಕಡಾ 0.8ರಷ್ಟಿದ್ದು, ಇದರಲ್ಲಿ ಶೇಕಡಾ 86.7 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ, ಅದರಲ್ಲಿ ಶೇಕಡಾ 52.0 ರಷ್ಟು ಶಿಕ್ಷೆಯಾಗಿದೆ. 2011–12 ರಲ್ಲಿ 8570 ಒಟ್ಟು ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ಅಪರಾಧಗಳು ದಾಖಲಾಗಿದ್ದು, ಇದರಲ್ಲಿ ಶೇಕಡಾ 0.4 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿರುತ್ತದೆ. ಇದರಲ್ಲಿ ಅಪರಾಧ ಪ್ರಕರಣದ ದರ ಶೇಕಡಾ 0.7 ರಷ್ಟಿದ್ದು, ಇದರಲ್ಲಿ ಶೇಕಡಾ 96.4 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ, ಶೇಕಡಾ 45.8 ರಷ್ಟು ಶಿಕ್ಷೆಯಾಗಿದೆ. 2012–13 ರಲ್ಲಿ 9173 ಒಟ್ಟು ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ಅಪರಾಧಗಳು ದಾಖಲಾಗಿದ್ದು, ಇದರಲ್ಲಿ ಶೇಕಡಾ 0.4 ರಷ್ಟು ಮಾತ್ರ ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿರುತ್ತದೆ. ಇದರಲ್ಲಿ ಅಪರಾಧ ಪ್ರಕರಣದ ದರ ಶೇಕಡಾ 1.6 ರಷ್ಟಿದ್ದು, ಅದರಲ್ಲಿ ಶೇಕಡಾ 96.1 ರಷ್ಟು ಚಾರ್ಜ್‌ಸೀಟ್ ಸಲ್ಲಿಕೆಯಾಗಿ ಶೇಕಡಾ 36.9 ರಷ್ಟು ಮಾತ್ರ ಶಿಕ್ಷೆಯಾಗಿದೆ. 2013–14 ರಲ್ಲಿ 12589 ಒಟ್ಟು ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ಅಪರಾಧಗಳು ದಾಖಲಾಗಿದ್ದು, ಇದರಲ್ಲಿ ಶೇಕಡಾ 0.5ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿರುತ್ತದೆ. ಇದರಲ್ಲಿ ಅಪರಾಧ ಪ್ರಕರಣದ ದರ ಶೇಕಡಾ 2.1 ರಷ್ಟಿದ್ದು, ಅದರಲ್ಲಿ ಶೇಕಡಾ 96.1 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ ಶೇಕಡಾ 32.0 ರಷ್ಟು ಮಾತ್ರ ಶಿಕ್ಷೆಯಾಗಿದೆ. 2014–15 ರಲ್ಲಿ 18376 ಒಟ್ಟು ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ ಶೇಕಡಾ 0.5ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿರುತ್ತದೆ. ಇದರಲ್ಲಿ ಅಪರಾಧ ಪ್ರಕರಣದ ದರ ಶೇಕಡಾ 1.8 ರಷ್ಟಿದ್ದು, 95.2 ರಷ್ಟು ಚಾರ್ಜ್‌ಸೀಟ್ ಸಲ್ಲಿಕೆಯಾಗಿದ್ದು, ಇದರಲ್ಲಿ ಶೇಕಡಾ 32.1 ರಷ್ಟು ಮಾತ್ರ ಶಿಕ್ಷೆಯಾಗಿರುತ್ತದೆ. 2015–16 ರಲ್ಲಿ 19267 ಒಟ್ಟು ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ ಶೇಕಡಾ 0.6 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿರುತ್ತದೆ. ಇದರಲ್ಲಿ ಅಪರಾಧ ಪ್ರಕರಣದ ದರವು ಶೇಕಡಾ 2.0 ರಷ್ಟಿದ್ದು, ಇದರಲ್ಲಿ ಶೇಕಡಾ 96.1 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿದ್ದು, ಇದರಲ್ಲಿ ಶೇಕಡಾ 31.5 ರಷ್ಟು ಮಾತ್ರ ಶಿಕ್ಷೆಯಾಗಿದೆ. 2016–17 ರಲ್ಲಿ 27344 ಒಟ್ಟು ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ ಶೇಕಡಾ 0.3 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿರುತ್ತದೆ. ಇದರಲ್ಲಿ ಅಪರಾಧ ಪ್ರಕರಣದ ದರ ಶೇಕಡಾ 1.2 ರಷ್ಟಿದ್ದು, ಇದರಲ್ಲಿ ಶೇಕಡಾ 95.4ರಷ್ಟು ಚಾರ್ಜ್‌ಸೀಟ್ ಸಲ್ಲಿಕೆಯಾಗಿದ್ದು, ಇದರಲ್ಲಿ ಶೇಕಡಾ 35.0ರಷ್ಟು ಮಾತ್ರ ಶಿಕ್ಷೆಯಾಗಿದೆ. 2017–18 ರಲ್ಲಿ 20948 ಒಟ್ಟು ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ ಶೇಕಡಾ 0.4 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿರುತ್ತದೆ, ಇದರಲ್ಲಿ ಅಪರಾಧ ಪ್ರಕರಣದ ದರವು ಶೇಕಡಾ 2.0 ರಷ್ಟಿದ್ದು, ಇದರಲ್ಲಿ ಶೇಕಡಾ 96.2 ರಷ್ಟು ಚಾರ್ಜ್‌ಸೀಟ್ ಸಲ್ಲಿಕೆಯಾಗಿ, ಇದರಲ್ಲಿ ಶೇಕಡಾ 37.2 ರಷ್ಟು ಮಾತ್ರ ಶಿಕ್ಷೆಯಾಗಿದೆ. 2018–19 ರಲ್ಲಿ 20962 ಒಟ್ಟು ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ ಶೇಕಡಾ 0.5 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿರುತ್ತದೆ, ಇದರಲ್ಲಿ ಅಪರಾಧ ಪ್ರಕರಣದ ದರ ಶೇಕಡಾ 0.9 ರಷ್ಟಿದ್ದು, ಇದರಲ್ಲಿ ಶೇಕಡಾ 97.0 ರಷ್ಟು ಚಾರ್ಜ್‌ಸೀಟ್ ಸಲ್ಲಿಕೆಯಾಗಿ, ಇದರಲ್ಲಿ ಶೇಕಡಾ 34.1 ರಷ್ಟು ಶಿಕ್ಷೆಯಾಗಿದೆ. ಆದರೂ ಸಹ ಶಿಕ್ಷೆಯ ಪ್ರಮಾಣ ಮಾತ್ರ ಶೇಕಡ 35 ಕ್ಕಿಂತ ಕಡಿಮೆ ಇರುವುದು ಕಂಡುಬರುತ್ತದೆ.

**ಕೋಷ್ಟಕ 4:** ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಅಪಹರಣ ಮತ್ತು ಅಪಹರಣಗಳ ವಿವರ

| ಕ್ರ.ಸಂ | ವರ್ಷಗಳು | ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಅಪಹರಣ ಮತ್ತು ಅಪಹರಣಗಳು | IPC ಅಡಿಯಲ್ಲಿ ದಾಖಲಾದ ಪ್ರಕರಣಗಳ ದರ | ಅಪರಾಧದ ದರ | ಚಾರ್ಜ್ ಸೀಟ್ | ಶಿಕ್ಷೆಯ ಪ್ರಮಾಣ |
|---|---|---|---|---|---|---|
| 1 | 2009–10 | 25741 | 1.2 | 2.2 | 73.5 | 26.8 |
| 2 | 2010–11 | 29795 | 1.3 | 2.5 | 74.2 | 28.1 |
| 3 | 2011–12 | 35565 | 1.5 | 2.9 | 73.0 | 28.1 |
| 4 | 2012–13 | 38262 | 1.6 | 6.5 | 72.9 | 21.2 |
| 5 | 2013–14 | 51881 | 2.0 | 8.8 | 68.4 | 21.1 |
| 6 | 2014–15 | 57311 | 2.8 | 9.6 | 68.2 | 21.3 |
| 7 | 2015–16 | 59277 | 2.8 | 9.8 | 68.0 | 23.9 |
| 8 | 2016–17 | 33732 | 4.7 | 11.3 | 69.0 | 21.8 |
| 9 | 2017–18 | 30614 | 4.6 | 10.5 | 70.1 | 23.5 |
| 10 | 2018–19 | 33354 | 4.7 | 11.3 | 67.3 | 22.6 |

**ಆಧಾರ:** ಭಾರತ ರಾಷ್ಟ್ರೀಯ ಅಪರಾಧ ಬ್ಯೂರೋ ವರದಿ, ನವದೆಹಲಿ, ವಾರ್ಷಿಕ ವರದಿ 2009–10 ರಿಂದ 2018–19ರವರೆಗೆ

ಈ ಮೇಲಿನ ಕೋಷ್ಟಕ 4 ರಲ್ಲಿನ ಅಂಕಿ–ಅಂಶಗಳನ್ನು ವಿಶ್ಲೇಷಣೆಗೆ ಒಳಪಡಿಸಿದಾಗ; 2009–10 ರಿಂದ 2018–19 ರವರೆಗೆ 10 ವರ್ಷಗಳಲ್ಲಿ 2009–10 ರಲ್ಲಿ 25741 ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಅಪಹರಣ ಮತ್ತು ಅಪಹರಣದ ಪ್ರಕರಣಗಳಿದ್ದು, ಶೇಕಡಾ 1.2 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾಗಿರುವ ಪ್ರಕರಣಗಳ ದರವಾಗಿದ್ದು, ಇದರಲ್ಲಿ ಶೇಕಡಾ 2.2 ರಷ್ಟು ಅಪರಾಧದ ದರ. ಶೇಕಡಾ 73.5 ರಷ್ಟು ಚಾರ್ಜ್‌ಸೀಟ್ ಸಲ್ಲಿಕೆಯಾಗಿ, ಇದರಲ್ಲಿ ಶೇಕಡಾ 26.8 ರಷ್ಟು ಮಾತ್ರ ಶಿಕ್ಷೆ ಆಗಿರುತ್ತದೆ. 2010–11 ರಲ್ಲಿ 29795 ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಅಪಹರಣ ಮತ್ತು ಅಪಹರಣದ ಪ್ರಕರಣಗಳಿದ್ದು, ಶೇಕಡಾ 1.3 ರಷ್ಟು ಮಾತ್ರ ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾಗಿದೆ. ಇದರಲ್ಲಿ ಶೇಕಡಾ 2.2 ರಷ್ಟು ಅಪರಾಧದ ದರವಾಗಿ ಚಾರ್ಜ್ ಸೀಟ್ ಮಾತ್ರ ಶೇಕಡ 74.2 ರಷ್ಟು ಸಲ್ಲಿಕೆಯಾಗಿ, ಶೇಕಡ 28.1 ರಷ್ಟು ಮಾತ್ರ ಶಿಕ್ಷೆಯಾಗಿದೆ. 2011–12 ರಲ್ಲಿ 35565 ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಅಪಹರಣ ಮತ್ತು ಅಪಹರಣದ ಪ್ರಕರಣಗಳಿದ್ದು, ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಶೇಕಡಾ 1.5 ರಷ್ಟು ಮಾತ್ರ ಇದೆ. ಶೇಕಡ 2.9 ರಷ್ಟು ಅಪರಾಧ ದರವಾಗಿ, ಚಾರ್ಜ್ ಶೀಟ್ ಮಾತ್ರ ಶೇಕಡ 73.0 ರಷ್ಟು ಸಲ್ಲಿಕೆಯಾಗಿದೆ. ಇದರಲ್ಲಿ ಶೇಕಡಾ 28.1 ರಷ್ಟು ಮಾತ್ರ ಶಿಕ್ಷೆಯಾಗಿದೆ. 2012–13 ರಲ್ಲಿ 38262 ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಅಪಹರಣ ಮತ್ತು ಅಪಹರಣದ ಪ್ರಕರಣಗಳಿದ್ದು, ಇದರಲ್ಲಿ ಶೇಕಡ 1.6 ರಷ್ಟು ಮಾತ್ರ ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ, ಶೇಕಡ 6.5 ರಷ್ಟು ಅಪರಾಧದ ದರವಾಗಿ ಶೇಕಡಾ 72.9 ರಷ್ಟು ಸಲ್ಲಿಕೆಯಾಗಿದೆ. ಆದರೆ ಶೇಕಡ 21.1 ರಷ್ಟು ಮಾತ್ರ ಶಿಕ್ಷೆಯಾಗಿದೆ. 2013–14 ರಲ್ಲಿ 51881 ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಅಪಹರಣ ಮತ್ತು ಅಪಹರಣದ ಪ್ರಕರಣಗಳಿದ್ದು, ಇದರಲ್ಲಿ ಶೇಕಡಾ 2.0 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾಗಿದೆ. ಆದರೆ ಶೇಕಡ 8.8 ರಷ್ಟು ಅಪರಾಧ ದರವಾಗಿದೆ. ಇದರಲ್ಲಿ 68.4 ರಷ್ಟು ಚಾರ್ ಸೀಟ್ ಸಲ್ಲಿಕೆಯಾಗಿದೆ. ಆದರೆ ಶೇಕಡ 21.3 ರಷ್ಟು ಮಾತ್ರ ಶಿಕ್ಷೆ ಆಗಿರುತ್ತದೆ. 2014–15 ರಲ್ಲಿ 57811 ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಅಪಹರಣ ಮತ್ತು ಅಪಹರಣದ ಪ್ರಕರಣಗಳಿದ್ದು, ಇದರಲ್ಲಿ ಶೇಕಡ 2.8 ರಷ್ಟು ದಾಖಲಾಗಿದೆ. ಇದರಲ್ಲಿ ಶೇಕಡ 9.6 ರಷ್ಟು ಅಪರಾಧದ ದರವಾಗಿ, ಶೇಕಡಾ 68.2 ರಷ್ಟು ಚಾರ್ಜ್ ಶೀಟ್ ಸಲ್ಲಿಕೆಯಾಗಿದೆ. ಇದರಲ್ಲಿ ಶೇಕಡಾ 21.3 ರಷ್ಟು ಮಾತ್ರ ಶಿಕ್ಷೆಯಾಗಿದೆ. 2015–16 ರಲ್ಲಿ 59272 ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಅಪಹರಣ ಮತ್ತು ಅಪಹರಣದ ಪ್ರಕರಣಗಳಿದ್ದು, ಅದರಲ್ಲಿ ಶೇಕಡ 2.8 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾಗಿ ಅದರಲ್ಲಿ ಶೇಕಡಾ 9.8 ರಷ್ಟು ಅಪರಾಧದ ದರವಾಗಿದೆ. ಹಾಗೆಯೇ ಶೇಕಡ 68.0 ರಷ್ಟು ಚಾರ್ಜ್ ಸಲ್ಲಿಕೆಯಾಗಿ, ಶೇಕಡ 23.9 ರಷ್ಟು ಮಾತ್ರ ಶಿಕ್ಷೆಯಾಗಿದೆ. 2016–17 ರಲ್ಲಿ 33732 ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಅಪಹರಣ ಮತ್ತು ಅಪಹರಣದ ಪ್ರಕರಣಗಳಿದ್ದು, ಇದರಲ್ಲಿ ಶೇಕಡ 4.7 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾಗಿ ಶೇಕಡ 11.3 ರಷ್ಟು ಅಪರಾಧದ ದರವಾಗಿ, ಶೇಕಡ 69.0ರಷ್ಟು ಚಾರ್ಜ್ ಸಲ್ಲಿಕೆಯಾಗಿದೆ. ಅದರಲ್ಲಿ 21.8ರಷ್ಟು ಮಾತ್ರ ಶಿಕ್ಷೆಯಾಗಿದೆ. 2017–18 ರಲ್ಲಿ 30614 ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಅಪಹರಣ ಮತ್ತು ಅಪಹರಣದ ಪ್ರಕರಣಗಳಿದ್ದು, ಅದರಲ್ಲಿ ಶೇಕಡ 4.6 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾಗಿದೆ. ಅದರಲ್ಲಿ ಶೇಕಡ 10.5 ರಷ್ಟು ಅಪರಾಧದ ದರವಾಗಿ ಶೇಕಡ 70.1 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ ಅದರಲ್ಲಿ ಶೇಕಡಾ 23.5 ರಷ್ಟು ಮಾತ್ರ ಶಿಕ್ಷೆಯಾಗಿರುತ್ತದೆ. 2018–19 ರಲ್ಲಿ 33554 ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಅಪಹರಣ ಮತ್ತು ಅಪಹರಣದ ಪ್ರಕರಣಗಳಿದ್ದು, ಅದರಲ್ಲಿ ಶೇಕಡ 4.7 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾಗಿದೆ. ಅದರಲ್ಲಿ ಶೇಕಡ 11.3 ರಷ್ಟು ಅಪರಾಧ ದರವಾಗಿದೆ ಇದರಲ್ಲಿ ಶೇಕಡ 67.3 ರಷ್ಟು ಚಾರ್ಜ್ ಸಲ್ಲಿಕೆಯಾಗಿ, ಅದರಲ್ಲಿ ಶೇಕಡ 22.6 ರಷ್ಟು ಮಾತ್ರ ಶಿಕ್ಷೆಯಾಗಿರುತ್ತದೆ. ಹೆಚ್ಚಿನ ಪ್ರಕರಣಗಳು ಚಾರ್ಜ್‌ಸೀಟ್ ನ್ಯಾಯಾಲಯಗಳಿಗೆ ಸಲ್ಲಿಕೆಯಾಗಿದ್ದರೂ ಸಹ ಅಪರಾಧವನ್ನು ಮಾಡಿದವರಿಗೆ ನೀಡಿರುವ ಶಿಕ್ಷೆಯ ಪ್ರಮಾಣ ಮಾತ್ರ ಅತ್ಯಂತ ಕಡಿಮೆ ಆಗಿರುತ್ತದೆ ಎಂದು ಹೇಳಬಹುದು.

**ಕೋಷ್ಟಕ 5:** ಪತಿ ಮತ್ತು ಸಂಬಂಧಿಕರಿಂದ ಮಹಿಳೆಯ ಮೇಲಿನ ಕ್ರೂರತ್ವ ಪ್ರಕರಣಗಳು

| ಕ್ರ.ಸಂ | ವರ್ಷಗಳು | ಪತಿ ಮತ್ತು ಸಂಬಂಧಿಕರಿಂದ ಮಹಿಳೆಯ ಮೇಲಿನ ಕ್ರೂರತ್ವ ಪ್ರಕರಣಗಳು | IPC ಅಡಿಯಲ್ಲಿ ದಾಖಲಾದ ಪ್ರಕರಣಗಳ ದರ | ಅಪರಾಧದ ದರ | ಚಾರ್ಜ್ ಸೀಟ್ | ಶಿಕ್ಷೆಯ ಪ್ರಮಾಣ |
|---|---|---|---|---|---|---|
| 1 | 2009–10 | 89546 | 4.2 | 7.7 | 93.3 | 19.8 |
| 2 | 2010–11 | 94041 | 4.2 | 7.9 | 94.2 | 19.1 |
| 3 | 2011–12 | 99135 | 4.3 | 8.2 | 94.4 | 20.2 |
| 4 | 2012–13 | 106527 | 4.5 | 18.2 | 93.6 | 15.0 |
| 5 | 2013–14 | 118866 | 4.5 | 20.1 | 92.3 | 16.0 |
| 6 | 2014–15 | 122877 | 4.6 | 20.5 | 93.5 | 16.1 |
| 7 | 2015–16 | 113403 | 4.5 | 18.7 | 94.2 | 17.2 |
| 8 | 2016–17 | 110378 | 4.4 | 19.6 | 93.6 | 15.3 |
| 9 | 2017–18 | 174548 | 4.3 | 16.8 | 94.5 | 19.2 |
| 10 | 2018–19 | 104165 | 4.6 | 16.1 | 92.4 | 19.5 |

**ಆಧಾರ:** ಭಾರತ ರಾಷ್ಟ್ರೀಯ ಅಪರಾಧ ಬ್ಯೂರೋ ವರದಿ, ನವದೆಹಲಿ, ವಾರ್ಷಿಕ ವರದಿ 2009–10 ರಿಂದ 2018–19ರವರೆಗೆ

ಈ ಮೇಲಿನ ಕೋಷ್ಟಕ – 5 ರಲ್ಲಿನ ಅಂಕಿ – ಅಂಶಗಳನ್ನು ವಿಶ್ಲೇಷಿಸಿದಾಗ; 2009–10 ರಲ್ಲಿ ಪತಿ ಮತ್ತು ಸಂಬಂಧಿಕರಿಂದ ಮಹಿಳೆಯ ಮೇಲಿನ ಕ್ರೂರತ್ವ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ ಶೇಕಡ 4.2 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾಗಿರುವ ಪ್ರಕರಣಗಳ ದರವಾಗಿದೆ. ಅದರಲ್ಲಿ ಶೇಕಡ 7.9 ರಷ್ಟು ಅಪರಾಧದ ದರವಾಗಿದೆ. ಶೇಕಡ 93.3 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ, ಶೇಕಡ 19.8ರಷ್ಟು ಶಿಕ್ಷೆಯಾಗಿದೆ. 2010–11 ರಲ್ಲಿ 94041 ಪತಿ ಮತ್ತು ಸಂಬಂಧಿಕರಿಂದ ಮಹಿಳೆಯ ಮೇಲಿನ ಕ್ರೂರತ್ವ ಪ್ರಕರಣಗಳು ದಾಖಲಾಗಿದ್ದು, ಅದರಲ್ಲಿ ಶೇಕಡ 4.2 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿನ ಪ್ರಕರಣಗಳ ದರವಾಗಿದೆ. ಅದರಲ್ಲಿ ಶೇಕಡ 7.9 ರಷ್ಟು ಅಪರಾಧದ ದರವಾಗಿದೆ. ಹಾಗೆಯೇ, ಶೇಕಡ 94.2 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ, ಶೇಕಡ 20.2 ರಷ್ಟು ಶಿಕ್ಷೆಯಾಗಿದೆ. 2011–12 ರಲ್ಲಿ 99135 ಮಹಿಳಾ ವಿರುದ್ಧದ ದಾಖಲಾದ ಅಪರಾಧ ಪ್ರಕರಣಗಳಾಗಿವೆ. ಇದರಲ್ಲಿ ಶೇಕಡ 4.3 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿ, ಶೇಕಡ 8.2ರಷ್ಟು ಅಪರಾಧದ ದರವಾಗಿದೆ. ಇದರಲ್ಲಿ ಶೇಕಡ 94.4 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ, ಶೇಕಡ 19.1 ರಷ್ಟು ಶಿಕ್ಷೆಯಾಗಿದೆ. 2012–13 ರಲ್ಲಿ 106527 ಪತಿ ಮತ್ತು ಸಂಬಂಧಿಕರಿಂದ ಮಹಿಳೆಯ ಮೇಲಿನ ಕ್ರೂರತ್ವ ಪ್ರಕರಣಗಳು ದಾಖಲಾಗಿದ್ದು, ಅದರಲ್ಲಿ ಶೇಕಡ 4.5 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿ, ಶೇಕಡ 18.2 ರಷ್ಟು ಅಪರಾಧದ ದರವಾಗಿದೆ. ಇದರಲ್ಲಿ 93.6 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ, ಶೇಕಡ 15.0 ರಷ್ಟು ಮಾತ್ರ ಶಿಕ್ಷೆಯಾಗಿರುತ್ತದೆ. 2013–14 ರಲ್ಲಿ 118866 ಪತಿ ಮತ್ತು ಸಂಬಂಧಿಕರಿಂದ ಮಹಿಳೆಯ ಮೇಲಿನ ಕ್ರೂರತ್ವ ಪ್ರಕರಣಗಳು ದಾಖಲಾಗಿದ್ದು, ಶೇಕಡ 4.5 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿ, ಶೇಕಡ 20.1 ರಷ್ಟು ಅಪರಾಧದ ದರವಾಗಿದೆ. ಅದರಲ್ಲಿ ಶೇಕಡ 92.3 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ, ಶೇಕಡ 16.0 ರಷ್ಟು ಮಾತ್ರವೇ ಶಿಕ್ಷೆಯಾಗಿದೆ. 2014–15 ರಲ್ಲಿ 122877 ಪತಿ ಮತ್ತು ಸಂಬಂಧಿಕರಿಂದ ಮಹಿಳೆಯ ಮೇಲಿನ ಕ್ರೂರತ್ವ ಪ್ರಕರಣಗಳು ದಾಖಲಾಗಿದ್ದು, ಶೇಕಡ 4.6 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿದೆ. ಇದರಲ್ಲಿ ಶೇಕಡ 20.5 ರಷ್ಟು ಅಪರಾಧದ ದರವಾಗಿದೆ. ಹಾಗೆಯೇ, ಶೇಕಡ 93.5 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ, ಶೇಕಡ 16.1 ರಷ್ಟು ಮಾತ್ರವೇ ಶಿಕ್ಷೆಯಾಗಿರುತ್ತದೆ. 2015–16 ರಲ್ಲಿ 113403 ಪತಿ ಮತ್ತು ಸಂಬಂಧಿಕರಿಂದ ಮಹಿಳೆಯ ಮೇಲಿನ ಕ್ರೂರತ್ವ ಪ್ರಕರಣಗಳು ದಾಖಲಾಗಿದ್ದು, ಅವುಗಳಲ್ಲಿ ಶೇಕಡ 4.5 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿದೆ. ಅದರಲ್ಲಿ ಶೇಕಡ 18.7 ರಷ್ಟು ಅಪರಾಧದ ದರವಾಗಿದೆ. ಅಲ್ಲದೆ ಶೇಕಡ 94.2 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ, ಶೇಕಡ 17.2 ರಷ್ಟು ಮಾತ್ರ ಶಿಕ್ಷೆಯಾಗಿರುವುದು ಕಂಡುಬರುತ್ತದೆ. 2016–17 ರಲ್ಲಿ 110378 ಪತಿ ಮತ್ತು ಸಂಬಂಧಿಕರಿಂದ ಮಹಿಳೆಯ ಮೇಲಿನ ಕ್ರೂರತ್ವ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ ಶೇಕಡ 4.4 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾಗಿದ್ದು, ಇದರಲ್ಲಿ ಶೇಕಡ 19.6 ರಷ್ಟು ಅಪರಾಧ ದರವಾಗಿದ್ದರೆ, ಚಾರ್ಜ್ ಸೀಟ್ ಶೇಕಡ 93.6 ರಷ್ಟು ಸಲ್ಲಿಯಾಗಿದೆ. ಆದರೆ ಶಿಕ್ಷೆಯ ಪ್ರಮಾಣ ಮಾತ್ರ ಶೇಕಡ 15.3 ರಷ್ಟಿರುವುದು ತಿಳಿದುಬರುತ್ತದೆ. 2017–18 ರಲ್ಲಿ 174548 ಪತಿ ಮತ್ತು ಸಂಬಂಧಿಕರಿಂದ ಮಹಿಳೆಯ ಮೇಲಿನ ಕ್ರೂರತ್ವ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ ಶೇಕಡ 4.3 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿದೆ. ಶೇಕಡ 16.8 ರಷ್ಟು ಅಪರಾಧದ ದರವಾಗಿದೆ. ಹಾಗೆಯೇ, ಶೇಕಡ 94.5 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ, ಇದರಲ್ಲಿ ಶೇಕಡ 19.2 ರಷ್ಟು ಶಿಕ್ಷೆಯಾಗಿದೆ. 2018–19 ರಲ್ಲಿ 104165 ಪತಿ ಮತ್ತು ಸಂಬಂಧಿಕರಿಂದ ಮಹಿಳೆಯ ಮೇಲಿನ ಕ್ರೂರತ್ವ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ ಶೇಕಡ 4.6 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿದೆ. ಹಾಗೆಯೇ, ಶೇಕಡ 16.1 ರಷ್ಟು ಅಪರಾಧದ ದರವಾಗಿ, ಶೇಕಡ 92.4 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿರುವುದು ಕಂಡುಬಂದರೆ, ಅದರಲ್ಲಿ 19.5 ರಷ್ಟು ಮಾತ್ರ ಶಿಕ್ಷೆಯಾಗಿರುತ್ತದೆ.

ಒಟ್ಟಾರೆಯಾಗಿ ಈ ಕೋಷ್ಟಕದಲ್ಲಿನ ಅಂಕಿ – ಅಂಶಗಳಲ್ಲಿ ಮಹಿಳಾ ವಿರುದ್ಧದ ಪ್ರಕರಣಗಳು ಮತ್ತು ಆ ಸಂಬಂಧಿತ ಚಾರ್ಜ್‌ಸೀಟ್ ಕೂಡ ನ್ಯಾಯಾಲಯಕ್ಕೆ ಶೇಕಡವಾರು ಸಲ್ಲಿಯಾಗಿರುತ್ತದೆ. ಆದರೆ, ಇಂತಹ ಅಪರಾಧದ ಕೃತ್ಯವನ್ನು ಎಸಗಿರುವಂತಹ ಕ್ರೂರಿಗಳಿಗೆ ಶಿಕ್ಷೆಯ ಪ್ರಮಾಣವನ್ನು ಮಾತ್ರ ಶೇಕಡ 20 ಕ್ಕಿಂತಲೂ ಕಡಿಮೆ ಪ್ರಮಾಣ ವಿಧಿಸಿರುವುದು ಎಲ್ಲೋ ಒಂದು ಕಡೆ ನ್ಯಾಯಾಂಗ ಮತ್ತು ಚಾಲ್ತಿಯಲ್ಲಿರುವಂತಹ ಕಾಯಿದೆ – ಕಾನೂನಿನ ಕಾರ್ಯಾಚರಣೆಯಲ್ಲಿ ವಿಫಲವಾಗಿದೆ ಎಂಬುದು ಭಾಷವಾಗುತ್ತದೆ.

**ಕೋಷ್ಟಕ 6:** ಹಿಂಸಾತ್ಮಕ ಕೃತ್ಯಗಳು

| ಕ್ರ.ಸಂ | ವರ್ಷಗಳು | ಹಿಂಸಾತ್ಮಕ ಕೃತ್ಯಗಳಿಂದ ದಾಖಲಾದ ಪ್ರಕರಣಗಳು | IPC ಅಡಿಯಲ್ಲಿ ದಾಖಲಾದ ಪ್ರಕರಣಗಳ ದರ | ಅಪರಾಧದ ದರ | ಚಾರ್ಜ್ ಸೀಟ್ | ಶಿಕ್ಷೆಯ ಪ್ರಮಾಣ |
|---|---|---|---|---|---|---|
| 1 | 2009–10 | 38711 | 1.8 | 3.3 | 95.8 | 29.0 |
| 2 | 2010–11 | 40613 | 1.8 | 3.4 | 96.7 | 29.7 |
| 3 | 2011–12 | 42968 | 1.8 | 3.6 | 96.5 | 27.7 |
| 4 | 2012–13 | 45351 | 1.5 | 7.7 | 96.0 | 24.0 |
| 5 | 2013–14 | 70739 | 2.7 | 11.9 | 95.8 | 25.7 |
| 6 | 2014–15 | 56676 | 1.9 | 17.4 | 96.1 | 29.4 |
| 7 | 2015–16 | 52372 | 2.1 | 14.3 | 95.2 | 23.9 |
| 8 | 2016–17 | 48284 | 1.9 | 15.2 | 96.3 | 33.2 |
| 9 | 2017–18 | 49362 | 2.0 | 16.0 | 96.0 | 27.2 |
| 10 | 2018–19 | 51361 | 1.9 | 15.1 | 96.1 | 27.1 |

**ಆಧಾರ:** ಭಾರತ ರಾಷ್ಟ್ರೀಯ ಅಪರಾಧ ಬ್ಯೂರೋ ವರದಿ, ನವದೆಹಲಿ, ವಾರ್ಷಿಕ ವರದಿ 2009–10 ರಿಂದ 2018–19ರವರೆಗೆ

ಈ ಕೋಷ್ಟಕ–6 ರಲ್ಲಿ 2009–10 ರಿಂದ 2019 ರವರೆಗಿನ ಹತ್ತು ವರ್ಷಗಳಲ್ಲಿ ಭಾರತದಲ್ಲಿ ಮಹಿಳಾ ವಿರುದ್ಧದ ಹಿಂಸಾತ್ಮಕ ಕೃತ್ಯಗಳು, ಮಹಿಳಾ ವಿರುದ್ಧದ ಅಪರಾಧಗಳು, ಭಾರತ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾಗಿರುವ ಪ್ರಕರಣಗಳ ದರವನ್ನು, ಅಪರಾಧದ ದರವನ್ನು ನ್ಯಾಯಾಲಯಕ್ಕೆ ಸಲ್ಲಿಕೆಯಾಗಿರುವ ಚಾರ್ಜ್‌ಸೀಟ್ ಮತ್ತು ಅದನ್ನು ಆಧರಿಸಿ ಶಿಕ್ಷೆಯ ಪ್ರಮಾಣವನ್ನು ಈ ಕೆಳಗಿನಂತೆ ಸ್ಪಷ್ಟವಾಗಿ ದಾಖಲೀಕರಿಸಲಾಗಿದೆ. ಅದರಂತೆಯೇ 2009–10 ರಲ್ಲಿ 38711 ಹಿಂಸಾತ್ಮಕ ಕೃತ್ಯಗಳಲ್ಲಿ ಮಹಿಳಾ ವಿರುದ್ಧದ ದಾಖಲಾದ ಅಪರಾಧ ಪ್ರಕರಣಗಳಾಗಿವೆ. ಅದರಲ್ಲಿ ಶೇಕಡಾ 1.8 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿದ್ದು, ಇದರಲ್ಲಿ ಶೇಕಡಾ 3.3 ರಷ್ಟು ಅಪರಾಧದ ದರವಾಗಿದೆ. ಇದರಲ್ಲಿ ಶೇಕಡಾ 95.8 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ, ಶೇಕಡಾ 29.0 ರಷ್ಟು ಮಾತ್ರ ಶಿಕ್ಷೆಯಾಗಿದೆ. 2010–11 ರಲ್ಲಿ 40613 ಹಿಂಸಾತ್ಮಕ ಕೃತ್ಯಗಳ ಪೈಕಿ ಮಹಿಳಾ ವಿರುದ್ಧದ ದಾಖಲಾದ ಅಪರಾಧ ಪ್ರಕರಣಗಳಾಗಿವೆ. ಇದರಲ್ಲಿ ಶೇಕಡಾ 1.8 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿದ್ದು, ಇದರಲ್ಲಿ ಶೇಕಡಾ 3.6 ರಷ್ಟು ಅಪರಾಧದ ದರವಾಗಿದೆ. ಹಾಗೆಯೇ ಶೇಕಡಾ 96.5 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ, ಶೇಕಡಾ 29.7 ರಷ್ಟು ಮಾತ್ರ ಶಿಕ್ಷೆಯಾಗಿರುತ್ತದೆ. 2011–12 ರಲ್ಲಿ 42968 ಹಿಂಸಾತ್ಮಕ ಕೃತ್ಯಗಳಲ್ಲಿ ಮಹಿಳಾ ವಿರುದ್ಧದ ದಾಖಲಾದ ಅಪರಾಧ ಪ್ರಕರಣಗಳಾಗಿವೆ. ಶೇಕಡಾ 1.8 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿದ್ದು, ಶೇಕಡಾ 3.6 ರಷ್ಟು ಅಪರಾಧದ ದರವಾಗಿದೆ. ಇದರಲ್ಲಿ ಶೇಕಡಾ 96.5 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ, ಶೇಕಡಾ 27.7 ರಷ್ಟು ಮಾತ್ರ ಶಿಕ್ಷೆಯಾಗಿದೆ. 2012–13 ರಲ್ಲಿ 45351 ಹಿಂಸಾತ್ಮಕ ಕೃತ್ಯಗಳಲ್ಲಿ ಮಹಿಳಾ ವಿರುದ್ಧದ ದಾಖಲಾದ ಅಪರಾಧ ಪ್ರಕರಣಗಳಾಗಿವೆ. ಇದರಲ್ಲಿ ಶೇಕಡಾ 1.5 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿದೆ. ಶೇಕಡಾ 7.7 ರಷ್ಟು ಅಪರಾಧದ ದರವಾಗಿದೆ. ಇದರಲ್ಲಿ ಶೇಕಡಾ 96.0 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿರುವುದು ಸರಿಯಷ್ಟೆ. ಆದರೆ ಶೇಕಡಾ 24.0 ರಷ್ಟು ಮಾತ್ರ ಶಿಕ್ಷೆಯಾಗಿದೆ. 2013–14 ರಲ್ಲಿ 70739 ಹಿಂಸಾತ್ಮಕ ಕೃತ್ಯಗಳಲ್ಲಿ ಮಹಿಳಾ ವಿರುದ್ಧದ ದಾಖಲಾದ ಅಪರಾಧ ಪ್ರಕರಣಗಳಾಗಿವೆ. ಇದರಲ್ಲಿ ಶೇಕಡಾ 2.7 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿದೆ. ಶೇಕಡಾ 11.9 ರಷ್ಟು ಅಪರಾಧದ ದರವಾಗಿದ್ದು, ಇದರಲ್ಲಿ ಶೇಕಡಾ 95.8 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿದ್ದರೂ ಸಹ ಶೇಕಡಾ 25.7 ರಷ್ಟು ಮಾತ್ರ ಶಿಕ್ಷೆಯನ್ನು ವಿಧಿಸಲಾಗಿದೆ. 2014–15 ರಲ್ಲಿ 56676 ಹಿಂಸಾತ್ಮಕ ಕೃತ್ಯಗಳಲ್ಲಿ ಮಹಿಳಾ ವಿರುದ್ಧದ ದಾಖಲಾದ ಅಪರಾಧ ಪ್ರಕರಣಗಳಾಗಿವೆ. ಇದರಲ್ಲಿ ಶೇಕಡಾ 1.9 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿದೆ. ಹಾಗೆಯೇ ಶೇಕಡಾ 17.4 ರಷ್ಟು ಅಪರಾಧದ ದರವಾಗಿದೆ. ಇದರಲ್ಲಿ ಶೇಕಡಾ 96.1 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ, ಶೇಕಡಾ 29.4 ರಷ್ಟು ಮಾತ್ರ ಶಿಕ್ಷೆಯನ್ನು ವಿಧಿಸಲಾಗಿದೆ. 2015–16 ರಲ್ಲಿ 52372 ಹಿಂಸಾತ್ಮಕ ಕೃತ್ಯಗಳಲ್ಲಿ ಮಹಿಳಾ ವಿರುದ್ಧದ ದಾಖಲಾದ ಅಪರಾಧ ಪ್ರಕರಣಗಳಾಗಿವೆ. ಇದರಲ್ಲಿ ಶೇಕಡಾ 2.1 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿದೆ. ಶೇಕಡಾ 14.3 ರಷ್ಟು ಅಪರಾಧದ ದರವಾಗಿದ್ದು, ಇದರಲ್ಲಿ 95.2 ರಷ್ಟು ಚಾರ್ಜ್ ಸೀಟ್ ನ್ಯಾಯಾಂಗಕ್ಕೆ ಸಲ್ಲಿಕೆಯಾಗಿದ್ದರೂ ಕೂಡ ಶೇಕಡಾ 23.9 ರಷ್ಟು ಶಿಕ್ಷೆಯಾಗಿದೆ. 2016–17 ರಲ್ಲಿ 48284 ಹಿಂಸಾತ್ಮಕ ಕೃತ್ಯಗಳಲ್ಲಿ ಮಹಿಳಾ ವಿರುದ್ಧದ ದಾಖಲಾದ ಅಪರಾಧ ಪ್ರಕರಣಗಳಾಗಿವೆ. ಶೇಕಡಾ 1.9 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿದ್ದು, ಶೇಕಡಾ 15.2 ರಷ್ಟು ಅಪರಾಧದ ದರವಾಗಿದೆ. ಇದರಲ್ಲಿ ಶೇಕಡಾ 96.3ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ ಶೇಕಡಾ 33.2 ರಷ್ಟು ಮಾತ್ರ ಶಿಕ್ಷೆಯಾಗಿದೆ. 2017–18 ರಲ್ಲಿ 49362 ಹಿಂಸಾತ್ಮಕ ಕೃತ್ಯಗಳಲ್ಲಿ ಮಹಿಳಾ ವಿರುದ್ಧದ ದಾಖಲಾದ ಅಪರಾಧ ಪ್ರಕರಣಗಳಾಗಿವೆ. ಇದರಲ್ಲಿ ಶೇಕಡಾ 2.0 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿದೆ. ಹಾಗೆಯೇ ಶೇಕಡಾ 16.0 ರಷ್ಟು ಅಪರಾಧದ ದರವಾಗಿದ್ದು, ಇದರಲ್ಲಿ 96.3 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ, ಶೇಕಡಾ 33.2 ರಷ್ಟು ಶಿಕ್ಷೆಯಾಗಿದೆ. 2018–19 ರಲ್ಲಿ 51361 ಹಿಂಸಾತ್ಮಕ ಕೃತ್ಯಗಳಲ್ಲಿ ಮಹಿಳಾ ವಿರುದ್ಧದ ದಾಖಲಾದ ಅಪರಾಧ ಪ್ರಕರಣಗಳಾಗಿವೆ. ಇದರಲ್ಲಿ ಶೇಕಡ 1.9 ರಷ್ಟು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರವಾಗಿದ್ದು, ಇದರಲ್ಲಿ 15.1 ರಷ್ಟು ಅಪರಾಧದ ದರವಾಗಿದೆ. ಹಾಗೆಯೇ ಶೇಕಡಾ 96.1 ರಷ್ಟು ಚಾರ್ಜ್ ಸೀಟ್ ನ್ಯಾಯಾಲಯಕ್ಕೆ ಸಲ್ಲಿಕೆಯಾಗಿದ್ದರೂ ಸಹ ಶೇಕಡಾ 27.1 ರಷ್ಟು ಮಾತ್ರ ಶಿಕ್ಷೆಯಾಗಿದೆ. ಆದರೆ ಮಹಿಳಾ ವಿರುದ್ಧದ ಹಿಂಸಾತ್ಮಕ ಕೃತ್ಯಗಳು ದೇಶದ ನಾನಾ ಭಾಗಗಳಲ್ಲಿ ದಾಖಲಾಗಿರುವುದು ಕೇಂದ್ರೀಯ ಅಪರಾಧ ಬ್ಯೂರೋ ವರದಿಯು ದೃಢಪಡಿಸಿರುತ್ತದೆ. ಆದರೂ ಪ್ರಕರಣ ದಾಖಲಿಸಿದ ಪೊಲೀಸ್ ಇಲಾಖೆಯು ನೂರಕ್ಕೆ

ಶೇಕಡಾ 96ರಷ್ಟು ಚಾರ್ಜ್‌ಸೀಟ್ ಸಲ್ಲಿಸಿರುತ್ತಾರೆ. ದುರಂತವೆಂದರೆ ಸಲ್ಲಿಕೆಯಾದ ಚಾರ್ಜ್‌ಸೀಟ್‌ಗೆ ಶಿಕ್ಷೆ ವಿಧಿಸದೆ ಇರುವುದು ಅಪರಾಧಿಗಳಿಗೆ ಮುಕ್ತ ವಾತಾವರಣ ಕಲ್ಪಿಸಿದಂತಾಗಿದೆ. ಹಾಗಾಗಿ ಮಹಿಳಾ ರಕ್ಷಣೆಯ ಕಾಳಜಿ ಕುಂಠಿತವಾಗಿದೆ.

**ಕೋಷ್ಟಕ 7:** ಮಹಿಳೆ ಮತ್ತು ಮಕ್ಕಳ ಮಾರಾಟ ವಿವರ

| ಕ್ರ.ಸಂ | ವರ್ಷಗಳು | ಮಹಿಳೆ ಮತ್ತು ಮಕ್ಕಳ ಮಾರಾಟದ ಪ್ರಕರಣಗಳು | IPC ಅಡಿಯಲ್ಲಿ ದಾಖಲಾದ ಪ್ರಕರಣಗಳ ದರ | ಅಪರಾಧದ ದರ | ದೋಷಾರೋಪಣ ಪಟ್ಟಿಯ ಪ್ರಮಾಣ | ಶಿಕ್ಷೆಯ ಪ್ರಮಾಣ |
|---|---|---|---|---|---|---|
| 1 | 2009–10 | 48 | 0.0 | 0.0 | 89.4 | 28.6 |
| 2 | 2010–11 | 36 | 0.0 | 0.0 | 90.6 | 20.0 |
| 3 | 2011–12 | 80 | 0.0 | 0.0 | 82.4 | 7.8 |
| 4 | 2012–13 | 59 | 0.0 | 0.0 | 90.0 | 16.1 |
| 5 | 2013–14 | 31 | 0.0 | 0.0 | 37.1 | 19.2 |
| 6 | 2014–15 | 13 | 0.0 | 0.0 | 35.2 | 17.1 |
| 7 | 2015–16 | 6 | 0.0 | 0.0 | 34.3 | 14.2 |
| 8 | 2016–17 | 18 | 0.0 | 0.0 | 42.1 | 18.1 |
| 9 | 2017–18 | 21 | 0.0 | 0.0 | 43.2 | 19.2 |
| 10 | 2018–19 | 25 | 0.0 | 0.0 | 44.0 | 15.4 |

**ಆಧಾರ:** ಭಾರತ ರಾಷ್ಟ್ರೀಯ ಅಪರಾಧ ಬ್ಯೂರೋ ವರದಿ, ನವದೆಹಲಿ, ವಾರ್ಷಿಕ ವರದಿ 2009–10 ರಿಂದ 2018–19ರವರೆಗೆ

ಈ ಮೇಲಿನ ಕೋಷ್ಟಕ–7 ರಲ್ಲಿ 2009–10 ರಿಂದ 2018–19 ರವರೆಗಿನ 10 ವರ್ಷಗಳ ಮಹಿಳಾ ಮತ್ತು ಮಕ್ಕಳ ಮಾರಾಟಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಪ್ರಕರಣಗಳನ್ನು ಕುರಿತು ವಿವರವನ್ನು ನೀಡುತ್ತದೆ. ಅದರಲ್ಲಿ ಮಹಿಳೆ ಮತ್ತು ಮಕ್ಕಳ ಮಾರಾಟದ ಪ್ರಕರಣಗಳು, ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳ ದರ, ಅಪರಾಧದ ದರ, ಚಾರ್ಜ್ ಸೀಟ್ ಸಲ್ಲಿಕೆ ಹಾಗೂ ಶಿಕ್ಷೆಯ ಪ್ರಮಾಣವನ್ನು ದಾಖಲಿಸಿರುತ್ತದೆ. 2009–10 ರಲ್ಲಿ 48 ಮಹಿಳಾ ಮತ್ತು ಮಕ್ಕಳ ಮಾರಾಟ ಅಪರಾಧ ಪ್ರಕರಣಗಳು ದಾಖಲಾಗಿರುತ್ತದೆ. ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ದಾಖಲಾದ ಪ್ರಕರಣಗಳು ಮತ್ತು ಅಪರಾಧದ ದರ ಶೂನ್ಯವೆಂದು ವರದಿ ಮಾಡಲಾಗಿದೆ. ಹಾಗೆಯೇ ಶೇಕಡಾ 89.4ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿದೆ. ಶೇಕಡಾ 28.6ರಷ್ಟು ಮಾತ್ರ ಶಿಕ್ಷೆಯಾಗಿದೆ. 2010–11 ರಲ್ಲಿ 36 ಮಹಿಳಾ ಮತ್ತು ಮಕ್ಕಳ ಮಾರಾಟ ಅಪರಾಧ ಪ್ರಕರಣಗಳು ದಾಖಲಾಗಿರುತ್ತವೆ. ಅದರಲ್ಲಿ ಭಾರತೀಯ ದಂಡ ಸಂಹಿತೆಯ ದರ ಮತ್ತು ಅಪರಾಧದ ದರವು ಶೂನ್ಯವಾಗಿದೆ. ಹಾಗೆಯೇ ಶೇಕಡಾ 90.6ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ, ಶೇಕಡಾ 20.0 ರಷ್ಟು ಮಾತ್ರ ಶಿಕ್ಷೆಯಾಗಿದೆ. 2011–12 ರಲ್ಲಿ 80 ಮಹಿಳಾ ಮತ್ತು ಮಕ್ಕಳ ಮಾರಾಟ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಅದರಲ್ಲಿ ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿನ ದರ ಮತ್ತು ಅಪರಾಧದ ದರವು ಕೂಡ ಶೂನ್ಯವಾಗಿರುತ್ತದೆ. ಹಾಗೆಯೇ ಶೇಕಡಾ 82.4 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ, ಶೇಕಡಾ 7.8ರಷ್ಟು ಮಾತ್ರ ಶಿಕ್ಷೆಯಾಗಿದೆ. 2012–13 ರಲ್ಲಿ 59 ಮಹಿಳಾ ಮತ್ತು ಮಕ್ಕಳ ಮಾರಾಟ ಅಪರಾಧ ಪ್ರಕರಣಗಳು ದಾಖಲಾಗಿರುತ್ತವೆ. ಅದರಲ್ಲಿ ಭಾರತೀಯ ದಂಡ ಸಂಹಿತೆಯ ಮತ್ತು ಅಪರಾಧದ ದರವು ಸಹ ಶೂನ್ಯವೆಂದು ಗುರುತಿಸಲಾಗಿದೆ. ಶೇಕಡಾ 90.0 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ, ಶೇಕಡಾ 16.1ರಷ್ಟು ಶಿಕ್ಷೆಯಾಗಿರುತ್ತದೆ. 2013–14 ರಲ್ಲಿ 31 ಮಹಿಳಾ ಮತ್ತು ಮಕ್ಕಳ ಮಾರಾಟ ಸಂಬಂಧಿತ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಅದರಲ್ಲಿ ಭಾರತೀಯ ದಂಡ ಸಂಹಿತೆಯ ಮತ್ತು ಅಪರಾಧದ ದರವು ಕೂಡ ಶೂನ್ಯವಾಗಿದೆ. ಹಾಗೆಯೇ ಶೇಕಡಾ 37.1 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ, ಶೇಕಡಾ 19.2 ರಷ್ಟು ಮಾತ್ರ ಶಿಕ್ಷೆಯಾಗಿದೆ. 2014–15 ರಲ್ಲಿ 13 ಮಹಿಳಾ ಮತ್ತು ಮಕ್ಕಳ ಮಾರಾಟ ಪ್ರಕರಣಗಳು ದಾಖಲಾಗಿದ್ದು, ಅವುಗಳಲ್ಲಿ ಭಾರತೀಯ ದಂಡ ಸಂಹಿತೆಯ ಮತ್ತು ಅಪರಾಧದ ದರವು ಶೂನ್ಯವೆಂದು ಗುರುತಿಸಲಾಗಿದೆ. ಹಾಗೆಯೇ ಶೇಕಡಾ 35.2 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ ಶೇಕಡಾ 17.1 ರಷ್ಟು ಮಾತ್ರ ಶಿಕ್ಷೆಯಾಗಿದೆ. 2015–16ರಲ್ಲಿ 6 ಮಹಿಳಾ ಮತ್ತು ಮಕ್ಕಳ ಮಾರಾಟ ಅಪರಾಧ ದಾಖಲಾಗಿದೆ. ಆದರೆ ಭಾರತೀಯ ದಂಡ ಸಂಹಿತೆಯ ಮತ್ತು ಅಪರಾಧದ ದರವು ಕೂಡ ಶೂನ್ಯವಾಗಿರುತ್ತದೆ. ಹಾಗೆಯೇ ಶೇಕಡಾ 34.3 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ, ಶೇಕಡಾ 14.2 ರಷ್ಟು ಮಾತ್ರ ಶಿಕ್ಷೆಯಾಗಿದೆ. 2016–17 ರಲ್ಲಿ 18 ಮಹಿಳಾ ಮತ್ತು ಮಕ್ಕಳ ಮಾರಾಟ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಅದರಲ್ಲಿ ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಮತ್ತು ಅಪರಾಧದ ದರವು ಕೂಡ ಶೂನ್ಯವಾಗಿದೆ. ಹಾಗೆಯೇ ಶೇಕಡಾ 42.1 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ, ಅದರಲ್ಲಿ ಶೇಕಡಾ 18.1 ರಷ್ಟು ಮಾತ್ರ ಶಿಕ್ಷೆಯಾಗಿದೆ. 2017–18 ರಲ್ಲಿ 21 ಮಹಿಳಾ ಮತ್ತು ಮಕ್ಕಳ ಮಾರಾಟ ಅಪರಾಧ ಪ್ರಕರಣಗಳು ದಾಖಲಾಗಿವೆ. ಇದರಲ್ಲಿ ಭಾರತೀಯ ದಂಡ ಸಂಹಿತೆಯ ಮತ್ತು ಅಪರಾಧದ ದರವು ಸಹ ಶೂನ್ಯವಾಗಿದೆ. ಹಾಗೆಯೇ ಶೇಕಡಾ 43.2 ರಷ್ಟು ಚಾರ್ಜ್ ಸೀಟ್ ಸಲ್ಲಿಕೆಯಾಗಿ, ಅದರಲ್ಲಿ ಶೇಕಡಾ 19.2 ರಷ್ಟು ಮಾತ್ರ ಶಿಕ್ಷೆಯಾಗಿರುತ್ತದೆ. 2018–19 ರಲ್ಲಿ 25 ಮಹಿಳಾ ಮತ್ತು ಮಕ್ಕಳ ಮಾರಾಟ ಅಪರಾಧ ಪ್ರಕರಣಗಳು ದಾಖಲಾಗಿವೆ. ಅದರಲ್ಲಿ ಭಾರತೀಯ ದಂಡ ಸಂಹಿತೆ ಮತ್ತು ಅಪರಾಧದ ದರವು ಸಹ ಶೂನ್ಯವಾಗಿರುತ್ತದೆ. ಹಾಗೆಯೇ ಶೇಕಡಾ 44.0 ರಷ್ಟು ಚಾರ್ಜ್‌ಸೀಟ್ ಸಲ್ಲಿಕೆಯಾಗಿ, ಶೇಕಡಾ 15.4 ರಷ್ಟು ಮಾತ್ರ ಶಿಕ್ಷೆಯಾಗಿರುವುದು ಕಂಡುಬರುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ, ಮಹಿಳಾ ಮತ್ತು ಮಕ್ಕಳ ಮಾರಾಟಕ್ಕೆ ಸಂಬಂಧಿಸಿದಂತೆ ಇರುವ ಅಪರಾಧದ ಪ್ರಕರಣಗಳು ಪೊಲೀಸ್ ಠಾಣೆಗಳಲ್ಲಿ ದಾಖಲಾಗಿ, ಚಾರ್ಜ್ ಸೀಟ್‌ನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರೂ ಕೂಡ ಈ ಬಗೆಯ ಅಪರಾಧ ಕೃತ್ಯವನ್ನು ಎಸಗಿರುವವರಿಗೆ ನೀಡಿರುವ ಶಿಕ್ಷೆಯ ಪ್ರಮಾಣ ಮಾತ್ರ ಶೇಕಡಾ 25 ಕ್ಕಿಂತ ಕಡಿಮೆ ಇರುವುದು ಕಂಡುಬರುತ್ತದೆ.

ಬಹುಮುಖ್ಯವಾಗಿ ಈ ಮೇಲಿನ ಪ್ರತಿಯೊಂದು ಕೋಷ್ಟಕದ ದತ್ತಾಂಶವನ್ನು ತಳಸ್ಪರ್ಶಿಯಾಗಿ ಅಧ್ಯಯನ ಮಾಡಿದಾಗ ಭಾರತದಲ್ಲಿ ಸಿಂಧೂ ಬಯಲಿನ ನಾಗರಿಕತೆ ಮತ್ತು ಬುದ್ಧ ಭಾರತವನ್ನು ಹೊರತುಪಡಿಸಿ ಅಂದಿನ ಪ್ರಾಚೀನ ಕಾಲಮಾನದಿಂದ

ಹಿಡಿದು ಇಂದಿನ ವಿಜ್ಞಾನ – ತಂತ್ರಜ್ಞಾನ ಯುಗದವರೆವಿಗೂ ಸಹ ದೇಶದ ಜನಸಂಖ್ಯೆಯಲ್ಲಿ ಸಿಂಹಪಾಲಿರುವ ಮಹಿಳೆಯರಿಗೆ ಯಾವುದೇ ತೆರನಾಗಿರುವ ಸೂಕ್ತ ಭದ್ರತೆಗಳು ಹಾಗೂ ರಕ್ಷಣೆಗಳನ್ನು ಇನ್ನೂ ಸಹ ಕಟ್ಟುನಿಟ್ಟಾಗಿ ಸರಿಯಾದ ಕ್ರಮದಲ್ಲಿ ಜಾರಿಗೆ ತರದೆ ಇರುವುದು ಒಂದು ದುರಂತದ ಸಂಗತಿಯೇ ಆಗಿರುತ್ತದೆ. ಅದರಲ್ಲೂ ಬಹುಮುಖ್ಯವಾಗಿ ತಳಸಮುದಾಯದ ಹೆಣ್ಣು ಮಕ್ಕಳ ಶೋಚನೀಯ ಸ್ಥಿತಿಯಂತು ಕಣ್ಣಿಗೆ ರಾಚುವಂತಿದೆ.

ಮಹಿಳೆಯರ ವಿರುದ್ಧದ ಹಿಂಸಾಚಾರ, ವಿಶೇಷವಾಗಿ ನಿಕಟ ಪಾಲುದಾರ ಹಿಂಸೆ ಮತ್ತು ಲೈಂಗಿಕ ಹಿಂಸೆ, ಪ್ರಮುಖ ಸಾರ್ವಜನಿಕ ಆರೋಗ್ಯ ಸಮಸ್ಯೆ ಮತ್ತು ಮಹಿಳೆಯರ ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ. ಆದ್ದರಿಂದಲೇ ಮಹಿಳೆಯರ ವಿರುದ್ಧದ ಹಿಂಸೆಯನ್ನು ಲಿಂಗ ಆಧಾರಿತ ಹಿಂಸಾಚಾರದ ಯಾವುದೇ ಕ್ರಿಯೆ ಎಂದು ವ್ಯಾಖ್ಯಾನಿಸಬಹುದು. ಅದು ದೈಹಿಕ, ಮಾನಸಿಕ ಹಾನಿ ಅಥವಾ ಲೈಂಗಿಕ ಹಿಂಸಾಚಾರ ಅಥವಾ ಮಹಿಳೆಯರಿಗೆ ನೋವನ್ನು ಉಂಟುಮಾಡುತ್ತಿವೆ. ಅಂಥಹ ಕೃತ್ಯಗಳ ಬೆದರಿಕೆಗಳು, ದಬ್ಬಾಳಿಕೆ, ಅನಿಯಂತ್ರಿತ ಅಭಾವವನ್ನು ಒಳಗೊಂಡಿರುತ್ತವೆ. ಸ್ವಾತಂತ್ರ್ಯ, ಸಾರ್ವಜನಿಕವಾಗಿ ಅಥವಾ ಮಹಿಳೆಯ ಖಾಸಗಿ ಜೀವನದಲ್ಲಿ ಸಂಭವಿಸಬಹುದಾದ ಹಿಂಸೆಗಳು ಎಂದು ಪರಿಗಣಿಸಬಹುದು.

ಭಾರತೀಯ ಸಂದರ್ಭದಲ್ಲಿ ಮಹಿಳೆಯರಿಗೆ ಸ್ಥಾನಮಾನದ ನೀಡಿಕೆಯ ವಿಷಯಕ್ಕಿಂತಲೂ ಮಿಗಿಲಾದುದು ಅವರ ರಕ್ಷಣೆ ಮತ್ತು ಭದ್ರತೆಯೇ ಆಗಿರುತ್ತದೆ. ಈ ಭದ್ರತೆ ಎಂಬುದು ಎಲ್ಲಿದೆ? ಎಂದು ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೇ ಆಗಿರುತ್ತದೆ. ದಿನದಿಂದ ದಿನಕ್ಕೆ, ವರ್ಷದಿಂದ ವರ್ಷಕ್ಕೆ ಮಹಿಳೆಯರ ಮೇಲಿನ ಅಪರಾಧದ ಪ್ರಕರಣಗಳು ಕ್ಷಣಗಳಿಗೆಯಲ್ಲಿ ಇಮ್ಮಡಿಯಾಗುತ್ತಲೇ ಇವೆ. ಅದರಲ್ಲಿ ಅತ್ಯಾಚಾರ, ವರದಕ್ಷಿಣೆ ಕಿರುಕುಳ, ಆತ್ಮಹತ್ಯೆಗೆ ಪ್ರಚೋದನೆ, ಗರ್ಭಪಾತವನ್ನುಂಟು ಮಾಡುವುದು ಅಥವಾ ಹೆಣ್ಣುಭ್ರೂಣ ಹತ್ಯೆ, ಗಾಯ, ತೀವ್ರಗಾಯ, ಆಸಿಡ್ ದಾಳಿ, ಬಲತ್ಕಾರದಿಂದ ತಪ್ಪೊಪ್ಪಿಸುವುದು, ಬಲಪ್ರಯೋಗ, ಹಲ್ಲೆ, ವೇಶ್ಯಾವೃತ್ತಿಗೆ ಪ್ರೇರಣೆ ನೀಡುವುದು ಮತ್ತು ಮಾರಾಟ ಮಾಡುವುದು, ಮಹಿಳೆಯರ ಸುಲಿಗೆ, ದರೋಡೆ, ಅಪರಾಧಿಕ ನಂಬಿಕೆ ದ್ರೋಹ, ವಂಚನೆ ಮಾಡುವುದು, ಸಾವು, ಕೊಲೆ, ಮಹಿಳೆ ಮತ್ತು ಮಕ್ಕಳ ಮಾರಾಟ, ಕುಟುಂಬಸ್ಥರು ಹಾಗೂ ಸಂಬಂಧಿಕರಿಂದ ಹಿಂಸೆ, ಸೈಬರ್ ಅಪರಾಧಗಳು ಪ್ರಧಾನ ನೆಲೆಯಲ್ಲಿ ಕಂಡುಬರುತ್ತವೆ. ಹೀಗೆ ಪ್ರತಿದಿನ, ಪ್ರತಿಗಂಟೆಯಲ್ಲೂ ಮಹಿಳೆಯರ ಮೇಲೆ ಒಂದಲ್ಲ ಒಂದು ರೀತಿಯಲ್ಲಿ ದೌರ್ಜನ್ಯಗಳು ನಡೆಯುತ್ತಿರುವುದು ಮತ್ತು ಪ್ರತಿ ಮಹಿಳೆಯು ಅದನ್ನು ಎದುರಿಸುತ್ತಿರುವುದು ಕಂಡುಬರುತ್ತಿದೆ. ನಮ್ಮ ಮುಂದಿರುವ ಸವಾಲು ಮತ್ತು ಸಮಸ್ಯೆಗಳನ್ನು ಆಳುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂವಿಧಾನದ ಅಧಿನಿಯಮದ ಅಡಿಯಲ್ಲಿ ಸಾಕಷ್ಟು ಯೋಜನೆಗಳನ್ನು ರೂಪಿಸಿದ್ದರೂ ಸಹ ಅವುಗಳನ್ನು ಸರಿಯಾದ ಕ್ರಮದಲ್ಲಿ ಜಾರಿಗೆ ತರದೆ ಇರುವುದು ಇದಕ್ಕಿರುವ ಮತ್ತೊಂದು ಬಹುದೊಡ್ಡ ಸವಾಲಾಗಿದೆ. ಕೆಲವು ಸಂದರ್ಭಗಳಲ್ಲಿ ಜಾರಿಗೊಳಿಸಿದರೂ ಸಹ ಮಹಿಳೆಯರಿಗೆ ಸರಿಯಾದ ಕ್ರಮದ ನಿರ್ವಹಣೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ನಿರ್ಲಕ್ಷ್ಯ ಧೋರಣೆ ತೋರುತ್ತಿರುವುದು ಕೂಡ ಇಂದಿನ ಮಹಿಳೆಯರ ಮೇಲಿನ ಅಪರಾಧ ಹಿಂಸಾತ್ಮಕ ಕೃತ್ಯಗಳಿಗೆ ಸಾಕ್ಷಿಯಾಗಿವೆ. ಈ ಸಂಶೋಧನಾ ಲೇಖನದ ಮೂಲಕ ಸಮಾಜಕ್ಕೆ ಹೊರ ತರುವ ವಿಷಯವೇನೆಂದರೆ; ಮಹಿಳೆಯು ಜೀವಿಸುತ್ತಿರುವ ಸಮಾಜವು ಆಕೆಯನ್ನು ಗೌರವಿತವಾಗಿ ನಡೆಸಿಕೊಳ್ಳುವುದು. ಅದು ತನ್ನ ಕುಟುಂಬದವರಿಂದಾಗಲಿ ಮತ್ತು ಸಮಾಜದಿಂದಾಗಲಿ ಅವರನ್ನು ರಕ್ಷಿಸುವುದು ಆದ್ಯ ಕರ್ತವ್ಯ ಮತ್ತು ಜವಾಬ್ಧಾರಿಯಾಗಿರುತ್ತದೆ. ಇವರಲ್ಲದೆ ಆಳುವ ಸರ್ಕಾರಗಳ ಜನಪ್ರತಿನಿಧಿಗಳು, ಮಂತ್ರಿಮಂಡಲ ಮತ್ತು ಅಧಿಕಾರಿ ವರ್ಗವು ಬುದ್ಧ ಬಯಸಿದ ಕಾರಣ್ಯ ಪ್ರಜ್ಞೆಯಿಂದಲೇ ರೂಪಿಸಿದ ಯೋಜನೆಗಳು, ಕಾನೂನು ಮತ್ತು ಕಾಯಿದೆಗಳನ್ನು ಯಾರ ಮುಲಾಜಿಗೂ ಹಾಗೂ ಒತ್ತಡಕ್ಕೂ ಒಳಗಾಗದೆ ಜಾರಿಗೊಳಿಸಿದಾಗ ಮಾತ್ರವೇ ಮಹಿಳೆಯರ ಮೇಲಿನ ದೌರ್ಜನ್ಯಗಳು ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯನ್ನು ತಡೆಯಲು ಸಾಧ್ಯ.

## ಆಧಾರ ಗ್ರಂಥಗಳು

1. ಭಾರತ ರಾಷ್ಟ್ರೀಯ ಅಪರಾಧ ಬ್ಯೂರೋ ವರದಿ, ವಾರ್ಷಿಕ ವರದಿ – 2009–10 ರಿಂದ 2018–19, ಗೃಹ ಇಲಾಖೆ, ಭಾರತ ಸರ್ಕಾರ, ನವದೆಹಲಿ
2. ಎನ್. ಚಿನ್ನಸ್ವಾಮಿ ಸೋಸಲೆ, ದಲಿತರ ಮೇಲಿನ ದೌರ್ಜನ್ಯ ಮತ್ತು ಸಾಮಾಜಿಕ ನ್ಯಾಯದ ಪ್ರಶ್ನೆಗಳು, ಯಾಜಿ ಪ್ರಕಾಶನ, ಮೈಸೂರು, 2013
3. ಎಸ್. ಎನ್. ಸಂಗೊಳ್ಳಿ, ಭಾರತ ದಂಡ ಸಂಹಿತೆ ಮತ್ತು ಅಪರಾಧಿಕ ಕಾನೂನಿನ ಮೂಲ ತತ್ವಗಳು, ವಿದ್ಯಾನಿಧಿ ಪ್ರಕಾಶನ, ಗದಗ, 1981
4. ಡಾ. ಎಚ್. ಎಸ್. ಅನುಪಮಾ, ದಲಿತತತ್ವ ಮತ್ತು ರಾಜಕೀಯ ಪ್ರಜ್ಞೆ, ಲಡಾಯಿ ಪ್ರಕಾಶನ, ಧಾರವಾಡ, 2016
5. Mukta Mittal, Dalit Women in India (Survival and corrent-Dilemma), Arise Publishers and Distrubutors, New Delhi, 2010
6. Sachidananda and Niraj Kumar, Dalit Women on the More, Serials Publications, New Delhi, 2005
7. Narayan Mishra, Exploitation and Atrocities on the Dalits in India, Kalpaz Publications, Delhi-2004